ಅಧ್ಯಕ್ಷರು:- ಪ್ರಾಸ್ತಾವಿಕ ಪ್ರಸ್ತಾವನೆ. Preliminary submission. ಒಬ್ಬೊಬ್ಬರೇ ಮಾತನಾಡಿ. ಬಹಳ ಜನ ಬೇಡ. Symbolic ಆಗಿ ಒಬ್ಬರೋ, ಇಬ್ಬರೋ ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಿಯಮ 60ರ ಅಡಿಯಲ್ಲಿ ರಾಜ್ಯದಲ್ಲಿ ನಡೆದ ಅತ್ಯಾಚಾರ ಘಟನೆಗಳ ಕುರಿತಂತೆ ನಾವು ಚರ್ಚಿಸುವುದಕ್ಕೆ ಅವಕಾಶವನ್ನು ಕೇಳಿದಾಗ ಸಾಕಷ್ಟು ವಾದ ವಿವಾದ, ಚರ್ಚೆಗಳು ನಡೆದು, ತಾವು ಈ ವಿಷಯವನ್ನು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ನಾನು ನಿಮಗೆ ಅಭಿನಂದಿಸುತ್ತೇನೆ.

ಅಧ್ಯಕ್ಷರು:- ಇವರು ಏನು ಹೇಳುತ್ತಾರೆ, ಹೇಳಲಿ ಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಹೇಳುತ್ತೇನೆ, ನಿಮ್ಮದೇನಾದರೂ ಹೇಳುವುದಿದ್ದರೆ ಆಮೇಲೆ ಹೇಳಿ. ತಾವು ಈ ಸದನದ ಅತ್ಯಂತ ಹಿರಿಯ ಸದಸ್ಯರಾಗಿ ಕೆಲಸ ನಿರ್ವಹಿಸಿ, ಸರ್ಕಾರದ ಜವಾಬ್ದಾರಿ ನಿರ್ವಹಿಸಿ, ತಾವು ಸಭಾ ಸ್ಥಾನದಲ್ಲಿ ಇವತ್ತು ಕುಳಿತು ನಮ್ಮ ಈ ಸದನಕ್ಕೆ ಸೂಕ್ತವಾದ ಮಾರ್ಗದರ್ಶನ, ಸಲಹೆ ಸೂಚನೆಗಳನ್ನು ಕಾಲಕಾಲಕ್ಕೆ ಕೊಡುತ್ತಲೇ ಇದ್ದೀರಿ. ಜನರ ಭಾವನೆಗಳನ್ನು ಗೌರವಿಸಿ, ಈ ಸದನದಲ್ಲಿ ಯಾವ ರೀತಿಯ ಕಾರ್ಯಕಲಾಪಗಳು ನಡೆಯಬೇಕು ಎನ್ನುವುದನ್ನು ನಮ್ಮೆಲ್ಲರಿಗಿಂತ ತಾವು ಹೆಚ್ಚು ಅರಿತಂಥ ಹಿರಿಯ ಅನುಭವಿಗಳು ತಾವು ಇದ್ದೀರಿ. ನೀವು, ನಮ್ಮೆಲ್ಲರ ಅಪೇಕ್ಷೆ ಇತ್ತು, ನಾವು ಧರಣಿಗೆ ಬಂದು ಅಷ್ಟೆಲ್ಲಾ ವಾದ ವಿವಾದ, ಚರ್ಚೆ ನಡೆದು, ನಡೆಯುವುದಕ್ಕಿಂತ ಮೊದಲೇ ನಮಗೆ ಅವಕಾಶ ಕೊಡುತ್ತೀರಿ ಎನ್ನುವಂಥ ಒಂದು ನಂಬಿಕೆ ನಮಗಿತ್ತು. ಆದರೆ, ಆಡಳಿತ ಪಕ್ಷದವರು ಮೊದಲು ಉತ್ತರ ಆಗಲಿ, ಶಿಕ್ಷಣ ಬೇಡಿಕೆ ಬಗ್ಗೆ ಉತ್ತರ ಆಗಲಿ, ಆಮೇಲೆ ಚರ್ಚೆಗೆ ತೆಗೆದುಕೊಳ್ಳಿ ಎಂದು ಅವರು ಒತ್ತಡ ತಂದಿರುವುದರಿಂದಾಗಿ ತಾವು ಮೊದಲು ಅವಕಾಶ ಕೊಡಲಿಲ್ಲ.

ಅಧ್ಯಕ್ಷರು:- ವಿಷಯಕ್ಕೆ ಬನ್ನಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಅವರ ಅಪೇಕ್ಷೆ ಅದು ಇದ್ದಿದ್ದರಿಂದಾಗಿ ತಾವು, ಅದಾಗಲಿ, ಅದಾದಮೇಲೆ ಕೊಡುತ್ತೇವೆನ್ನುವಂಥ ನಿಲುವನ್ನು ತೆಗೆದುಕೊಂಡಿರಿ.

ಅಧ್ಯಕ್ಷರು:- ಇಲ್ಲ, ನಾನೇ ತೆಗೆದುಕೊಂಡಿದ್ದು, ಅದು ನನ್ನ ತೀರ್ಮಾನವೇ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈಗ ಈ ಅವಕಾಶವನ್ನು ನೀವು ಕೊಟ್ಟದ್ದೀರಿ. ನಾನು ಈ ಸದನದಲ್ಲಿ ರಾಜ್ಯದ ಶಾಂತಿ ಸುವ್ಯವಸ್ಥೆ ಕುರಿತಂತೆ ವಿಸ್ತೃತವಾಗಿ ಚರ್ಚೆಯಾಗಿರುವುದು ಅದರೊಳಗೆ ನಾವೆಲ್ಲರೂ ಭಾಗಿಯಾಗಿದ್ದೇವೆ. ರಾಜ್ಯದ ಬಗ್ಗೆ, ನಮ್ಮ ಕರ್ನಾಟಕದ ಬಗ್ಗೆ ಇಡೀ ದೇಶದಲ್ಲಿ, ಇಡೀ ಜಗತ್ತಿನಲ್ಲೇ ಬೆಂಗಳೂರು, ಕರ್ನಾಟಕದ ಬಗ್ಗೆ ಬಹಳ ಗೌರವದ ಒಂದು ಸ್ಥಾನವಿದೆ. ಬೆಂಗಳೂರು IT, BT city ಯಾಗಿ ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಂಥ ನಗರವಾಗಿ ಕರ್ನಾಟಕಕ್ಕೆ ಒಂದು ವಿಶೇಷವಾದ ಸ್ಥಾನಮಾನ ದೇಶದಲ್ಲಿ, ರಾಷ್ಟ್ರದಲ್ಲಿ ಇರುವುದನ್ನು ನಾವು ನೋಡಿದ್ದೇವೆ. ನಾವು ಇಲ್ಲಿ ಆಯ್ಕೆಯಾದಂಥ ಜನಪ್ರತಿನಿಧಿಗಳು ನಾವೆಲ್ಲರೂ ಕರ್ನಾಟಕದ ಈ ಹೆಮ್ಮೆಯ ಸಾಧನೆಗಳು ಅನೇಕ ಕ್ಷೇತ್ರಗಳಲ್ಲಾಗಿರುವ ಬಗ್ಗೆ ಯಾವತ್ತೂ ಸಹ ಅಭಿಮಾನಪಟ್ಟಂಥವರು. ನಾವು ಸರ್ಕಾರವಾಗಿ, ಸರ್ಕಾರ ಮಾಡುತ್ತಿರುವ ಚಟುವಟಿಕೆಗಳ ಜೊತೆಯಲ್ಲಿ ಸರ್ಕಾರೇತರವಾಗಿ ರಾಜ್ಯದ ಬೆಳವಣಿಗೆಗೆ, ದೇಶದ ಬೆಳವಣಿಗೆಗಳಿಗೆ ಕೊಡುಗೆಯನ್ನು ಕೊಡುತ್ತಿರುವಂಥ ಬೆಂಗಳೂರಿನ ಜನತೆಯ ಬಗ್ಗೆ ಅಭಿಮಾನಪಟ್ಟಂಥವರು ನಾವು. ಆದರೆ, ಇತ್ತೀಚಿನ ಘಟನೆಗಳೆಲ್ಲವನ್ನೂ ನೋಡಿದರೆ, ನಾವು ಜಗತ್ತಿನೆದುರುಗಡೆಯಲ್ಲಿ, ದೇಶದೆದುರಗಡೆಯಲ್ಲಿ ಇಡೀ ಕರ್ನಾಟಕ ತಲೆ ತಗ್ಗಿಸುವಂಥ ಒಂದು ಸಂದರ್ಭ ನಿರ್ಮಾಣವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ನಾನು ಈ ರಾಜ್ಯದಲ್ಲಿ ಅಪರಾಧೀಕರಣ ಚಟುವಟಿಕೆಗಳು ಹೇಗೆ ಪ್ರಾರಂಭಗೊಂಡವು ಎನ್ನುವುದನ್ನು ಮತ್ತೆ ವಿಸ್ತರಿಸಿ ಇಲ್ಲಿ ಹೇಳುವುದಕ್ಕೆ ಬಯಸುವುದಿಲ್ಲ. ಏಕೆಂದರೆ, ಆಡಳಿತ ಪಕ್ಷದವರು ತಾವೇ 50–60 ವರ್ಷ ಈ ರಾಜ್ಯವನ್ನು ಆಳಿದ್ದೀರಿ. ಮಾತೆತ್ತಿದರೆ

ನಮ್ಮ ಬಿಜೆಪಿ 5 ವರ್ಷಗಳ ಸರ್ಕಾರದ ಬಗ್ಗೆ ನೀವು ಹೇಳುತ್ತೀರಿ. ನಮ್ಮ 5 ವರ್ಷಗಳ ಸರ್ಕಾರದ ಘಟನೆಗಳು ನಿಮ್ಮ ಆಡಳಿತದ ಅವಧಿಯದ್ದು.

ಅಧ್ಯಕ್ಷರು:– ಕಾಗೇರಿ, ನೋಟೀಸ್‌ನಲ್ಲಿ ಕೊಟ್ಟಿರುವುದರ ಬಗ್ಗೆ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ನಾನು ಅದಕ್ಕೇ ಬರುತ್ತಿದ್ದೇನೆ. ಆ ವಿಷಯಕ್ಕೆ ಬರುತ್ತಿದ್ದೇನೆ.

ಅಧ್ಯಕ್ಷರು:– ನೀವು ಹಾಗೆಲ್ಲ ಮಾಡಬಾರದು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇವರು ಹೇಗ ಮಾಡುತ್ತಾರೆಂದರೆ.. ..

(ಗೊಂದಲ)

ಶ್ರೀ ಪ್ರಮೋದ್ ಮಧ್ವರಾಜ್:– 60 ವರ್ಷಗಳಲ್ಲಿ ಏನು ಮಾಡಿದರು 5 ವರ್ಷಗಳಲ್ಲಿ ಎಲ್ಲಾ.. .. ಮಾಡಿತೋರಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು, ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ಹೇಳಿ.

(ಗೊಂದಲ)

ಅಧ್ಯಕ್ಷರು:– ಆಯಿತು, ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಏಕೆ ಮೊದಲೇ ಈ ಮಾತನ್ನು ಹೇಳಿದೆ ಎನ್ನುವುದು ಮುಖ್ಯ. ನಾನು, ನಮ್ಮ ಮಾನ್ಯ ಮುಖ್ಯಮಂತ್ರಿಯವರು, ನಮ್ಮ ಗೃಹ ಸಚಿವರು, ನಮ್ಮ ಹಿರಿಯ ಸಚಿವರುಗಳು ಈ ಹಿಂದೆ ಒಂದು ತಿಂಗಳ ಅಧಿವೇಶನ ನಡೆಯಿತಲ್ಲ, ಇದರೊಳಗೆ ಸರ್ಕಾರದ ಧಾಟಿಯನ್ನು ನಾನು ನೋಡಿದ್ದೇನೆ. ನಾನೂ 5 ಬಾರಿ ಗೆದ್ದು ಶಾಸಕನಾಗಿ ನಿಮ್ಮ ಜೊತೆಯಲ್ಲಿ, ಈ ಸದನವನ್ನು ನಾನೂ ಸಹ ಇಲ್ಲಿಯ ಆಗುಹೋಗುಗಳನ್ನು, ನನ್ನ ಅನುಭವದಿಂದ ನೋಡುತ್ತಿದ್ದೇನೆ.

ಅಧ್ಯಕ್ಷರು:– ಕಾಗೇರಿಯವರೆ, please ಕೇಳಿ. ನೀವು ಚರ್ಚೆ ಮಾಡುತ್ತೀರಲ್ಲ. ಪ್ರಾರಂಭಿಕವಾಗಿ submission ಮಾಡುತ್ತಿದ್ದೀರಿ. ಇದನ್ನು ಏಕೆ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಮನವರಿಕೆ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಇಷ್ಟು ಹೊತ್ತಿಗೆ ಮುಗಿದು ಹೋಗುತ್ತಿತ್ತು. ಸರ್ಕಾರದ ಧಾಟಿ ಏನಿದೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಮಾತನಾಡಿದ ನಂತರದಲ್ಲಿ ನಮ್ಮ ಸದಸ್ಯರುಗಳು ಉಳಿದವರು ಎಲ್ಲರೂ ಮಾತನಾಡಿದ ನಂತರದಲ್ಲಿ ಸರ್ಕಾರದ ಧಾಟಿ ಏನಿದೆ?

(ಗೊಂದಲ)

ಅಧ್ಯಕ್ಷರು:– ಆಯಿತು, ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಊಹಿಸಿ ಹೇಳುತ್ತಿದ್ದೇನೆ. ಏಕೆಂದರೆ ಈ ಒಂದೂಕಾಲು ವರ್ಷದ ಸರ್ಕಾರದ ಧಾಟಿ ಇದೆಯಲ್ಲ,

ಅಧ್ಯಕ್ಷರು:– ಮತ್ತೆ ಅದಕ್ಕೇ ಹೋಗುತ್ತೀರಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಹೇಗಿದೆ ಎಂದರೆ,

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು):– ಇದು preliminary submission. ರಾಜಕೀಯ ಮಾತನಾಡುವುದೇ?

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಅಂಥ ಕೆಲಸವೇನೂ ನಾವು ಮಾಡಿಲ್ಲ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಸದನದ ಗೌರವ ಕಳೆಯುವ ಕೆಲಸ ನಾವು ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು, ಬೇಡಿ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ:– ಮಾನ್ಯ ಅಧ್ಯಕ್ಷರೆ,

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ:– ನೀವು ಆಡಳಿತ ಪಕ್ಷದವರಿಗೆ ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು):– ಮಾನ್ಯ ಅಧ್ಯಕ್ಷರೆ, ನೀವು ಈಗೇನು preliminary submissionಗೆ ಅವಕಾಶ ಕೊಟ್ಟಿದ್ದೀರಿ ಅದರ ಮೇಲೆ ಮಾತನಾಡಲಿ. Politics ಮಾತನಾಡುತ್ತೇವೆಂದರೆ, politics ಮಾತನಾಡಬಹುದು.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್(ಇಂಧನ ಸಚಿವರು):– ಕೇವಲ ರಾಜಕಾರಣವನ್ನೇ ಮಾತನಾಡುತ್ತೇವೆಂದರೆ ರಾಜಕಾರಣವನ್ನೇ ಮಾತನಾಡಬಹುದು. ಅವರ, history, ನಮ್ಮ history ಹೇಳಬಹುದು.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು):– ಅವರು ವಿಚಾರ ಪ್ರಸ್ತಾಪ ಮಾಡಲಿ. ಆದರೆ, ವಿಚಾರ ಬಿಟ್ಟು ಇನ್ನೆಲ್ಲ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಈ ವಿಚಾರ ಬಗ್ಗೆ ಗಂಭೀರತೆ ಇಲ್ಲ ಎನ್ನುವುದು ಇದರಲ್ಲೇ ಅರ್ಥವಾಗುತ್ತದೆ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಬೇಡ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ಹೀಗೆಯೇ ಮಾತನಾಡಬೇಕೆಂದು ನೀವು ಬರೆದು ಕೊಟ್ಟುಬಿಡಿ, ಹಾಗೇಯೇ ಮಾತನಾತ್ತೇವೆ.

(ಗೊಂದಲ)

ಶ್ರೀ ಕೆ.ಗೋಪಾಲ ಪೂಜಾರಿ:– ಬೊಮ್ಮಾಯಿವರೆ, ಬರೆದುಕೊಡುವ ಅಗತ್ಯವಿಲ್ಲ. ನೀವು ವಿಷಯದ ಬಗ್ಗೆ ಪ್ರಸ್ತಾಪ ಮಾಡಿ ಸಾಕು.

(ಗೊಂದಲ)

ಅಧ್ಯಕ್ಷರು:– ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಯಾರದೋ ಹೆಸರು. ಮಾತನಾಡುವುದಕ್ಕೆ. ಇವತ್ತು ಘಟನ ನಡೆದಿದೆ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಅದರ ಹೆಸರಿನಲ್ಲಿ ರಾಜಕೀಯ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು:– ಆಯಿತು.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:– ಯಾರ ಹೆಸರಿನಲ್ಲೋ ಕಣ್ಣೀರು ಸುರಿಸಿ ರಾಜಕಾರಣ ಮಾಡುವುದಕ್ಕೆ ಇಲ್ಲಿ ಬಂದಿಲ್ಲ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):– ಏನಿದು?

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ:– Rape ಮಾಡಿದವರನ್ನು defend ಮಾಡಿಕೊಳ್ಳುವುದು ಸರ್ಕಾರದ ಕೆಲಸವಲ್ಲ.

(ಗೊಂದಲ)

ಶ್ರೀ ಪ್ರಮೋದ್ ಮಧ್ವರಾಜ್:– ಪೀಠಿಕೆ ಬೇಡ, ನೇರ subject ಗೆ ಬನ್ನಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಪ್ರಸ್ತಾಪ ಮಾಡುತ್ತಿರುವಂಥ ವಾಡಿಕೆ ಏನು? ನೀವು ಒಪ್ಪಿಗೆ ಕೊಟ್ಟಿದ್ದೇನು? Preliminary submission ಮಾಡಿ ಎಂದು.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ನೀವು 60 ವರ್ಷಗಳಲ್ಲಿ ಯಾರ್‍ಯಾರು ಇದ್ದರು? ಅಧಿಕಾರದಲ್ಲಿದ್ದರು.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಇವರು provoke ಮಾಡಿ ಮಾತನಾಡಿದರೆ ಅನಿವಾರ್ಯವಾಗಿ ಇಂಥದ್ದು ಸೃಷ್ಟಿಯಾಗುತ್ತದೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ:- Provoke ಮಾಡಿ ಮಾತನಾಡುವುದು ಬೇಡ. ನೀವು ಬಹಳ ಒಳ್ಳೆಯದು ಮಾಡಿದ್ದೀರಿ?

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ:- ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ. ಅದಕ್ಕೆ ಉತ್ತರ ಕೊಡುತ್ತಾರೆ. ನೀವು ಶಾಂತ ರೀತಿಯಿಂದ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಬೊಮ್ಮಾಯಿಯವರೆ, ಒಳಗಡೆ ನಡೆದದ್ದು, preliminary submission ಮಾಡಬೇಕೆಂದು.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:- Preliminary submission ಮಾಡಿ ಆಮೇಲೆ ಚರ್ಚೆಯಲ್ಲಿ ಈ ದೇಶದಲ್ಲಿ, ಈ ರಾಜ್ಯದಲ್ಲಿ, ಪ್ರಪಂಚದಲ್ಲಿ

ಏನೇನು ನಡೆದಿದೆ ಅದೆಲ್ಲವನ್ನೂ ಚರ್ಚೆ ಮಾಡೋಣ. ಈಗ preliminary submission ಮಾಡಿ.

(ಗೊಂದಲ)

ಅಧ್ಯಕ್ಷರು:- ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:- ತಾವು ಅವಕಾಶ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ:- ಮಾತನಾಡಿ. ನಿಜವಾಗಿ ಆ ವಿಚಾರದ ಬಗ್ಗೆ ಕಾಳಜಿ ಇದ್ದರೆ, subject ಬಗ್ಗೆ ಮಾತನಾಡಿ.

(ಗೊಂದಲ)

ಅಧ್ಯಕ್ಷರು:- ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಒಂದು ಮಾತನ್ನು, ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ. ಆಡಳಿತ ಪಕ್ಷದವರು, ತಾವು ನಿನ್ನೆಯೇ ಗೃಹ ಸಚಿವರಿಗೆ ಹೇಳಿದಿರಿ. ಗೃಹ ಸಚಿವರಾಗಿ ತಮ್ಮ ಜವಾಬ್ದಾರಿ ಇದೆ, ತಮ್ಮಲ್ಲಿ ತಾಳ್ಮೆ ಇರಬೇಕು, ಸಹನೆ ಇರಬೇಕು ಎಂದು ಹೇಳಿದಿರಿ. ರಮೇಶ್‌ಕುಮಾರ್‌ರವರೂ ಅದಕ್ಕೆ ಧ್ವನಿಗೂಡಿಸಿದರು. ನೀವು ಆಡಳಿತ ಪಕ್ಷವಾಗಿ ಅದೆಲ್ಲ ಇಟ್ಟುಕೊಳ್ಳಬೇಕು. ಹಿಂದೆ ಮಾನ್ಯ ಮುಖ್ಯಮಂತ್ರಿಯವರು ವಿರೋಧ ಪಕ್ಷದ ನಾಯಕರಾದಂಥ ಸಂದರ್ಭದಲ್ಲಿ ಜಯಚಂದ್ರರವರು ಉಪ ನಾಯಕರಾದಂಥ ಸಂದರ್ಭದಲ್ಲಿ ನಾವೂ ಅವರೇನೇನು ಮಾತನಾಡಿದ್ದಾರೆನ್ನುವುದನ್ನು ಪ್ರತ್ಯಕ್ಷವಾಗಿ ಕೇಳಿದ್ದೇವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಹಾಗಾಗಿ, ಸ್ವಲ್ಪ ತಾಳ್ಮೆ, ಸಮಾಧಾನದಲ್ಲಿ ಕೇಳಿ. ನೀವು ಉತ್ತರ ಕೊಡುವಾಗ ಸರ್ಕಾರದ ವಿಚಾರ ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನೀವು ಆಡಳಿತ ಪಕ್ಷದವರು ಹೀಗೇ ಮಾತನಾಡಿ ಎಂದು ಹೇಳುವಂಥದ್ದು ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:- ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಆರ್.ರಮೇಶ್‌ಕುಮಾರ್:- ಕಾಗೇರಿಯವರೆ, ಒಂದು yield ನಿಮಿಷ ಆಗಿ. I will help you. ಮತ್ತೆ ಮತ್ತೆ ಇದಾಗುವುದು ಬೇಡ ಎಂದು I will appeal.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಾನು ವಿಷಯಕ್ಕೆ ಬರುತ್ತೇನೆ. ನಾನೇಕೆ ಒಂದು ಹೇಳಿದೆ ಎಂದರೆ, ನಿಮ್ಮ ಉತ್ತರದ ಧಾಟಿ ಈ ನನ್ನ ಪ್ರಾಸ್ತಾವಿಕ, ಸದನದ ಪ್ರಾಸ್ತಾವಿಕ ಮಾತುಗಳು, ಯಾರ್ಯಾರು ಆಡುತ್ತಾರೆ ಅದೆಲ್ಲ ಮುಗಿದ ಮೇಲೆ ಮತ್ತೆ ಆ 5 ವರ್ಷದ್ದು ನೀವು ಹೇಳಿಕೊಂಡು ಆ ಜವಾಬ್ದಾರಿಯನ್ನು ನಿಭಾಯಿಸುವಂಥ ಅಥವಾ ರಾಜ್ಯದ ಜನತೆಗೆ ಯಾವ ಸಂದೇಶ ಕಳುಹಿಸಬೇಕೋ ಆ ಸಂದೇಶ ಕಳುಹಿಸುವುದರೊಳಗೆ ಈ ಸದನ ತನ್ನ ಜವಾಬ್ದಾರಿಯನ್ನು ತೋರಿಸಬೇಕು. ಆ ಹಿನ್ನೆಲೆಯಲ್ಲಿ ಈ ಮಾತನ್ನು ನಾನು ಹೇಳಿದೆ. ರಾಜಕೀಯ ಕಾರಣಗಳಿಗೋಸ್ಕರವಾಗಿ ಏನಾಗುತ್ತದೆ, ನಿಮ್ಮ 5 ವರ್ಷಗಳಲ್ಲಿ ಏನಾಗಿದೆ ಗೊತ್ತಿದೆ ಎಂದು ಅದನ್ನು ಹೇಳಿ ಹೇಳಿ ನೀವು, ನಾವೇನು ಮಾಡಬೇಕು, ಈ ಸದನದ 225 ಸದಸ್ಯರು ಏನು ಮಾಡಬೇಕು? ನಾವು ಈ ರಾಜ್ಯದ ಆರೂವರೆ ಕೋಟಿ ಜನರಿಗೆ ಯಾವ ಸಂದೇಶ

ಕಳುಹಿಸಬೇಕೋ ಅದನ್ನು ಕಳುಹಿಸುವುದಕ್ಕೆ ವಿಫಲರಾಗಬಾರದು. ಆ ಹಿನ್ನೆಲೆಯಲ್ಲಿ ಈ ಮಾತುಗಳನ್ನು ನಾನು ಹೇಳಿದ್ದೇನೆ. ಬಹಳ ಮುಖ್ಯವಾದಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಿನ್ನೆ, ಮೊನ್ನೆ ಸಹ ಅತ್ಯಾಚಾರ ಘಟನೆಗಳ ಬಗ್ಗೆ ಚರ್ಚೆಯಾಗಿದೆ. ಈ ಒಂದು ವಾರದಲ್ಲಿ ಘಟನೆಗಳು ಎಷ್ಟಾಗಿವೆ ಎನ್ನುವಂಥದ್ದನ್ನು ಇವತ್ತು ಎಲ್ಲಾ ಪತ್ರಿಕೆಗಳೂ ಬರೆದಿವೆ, ಮಾಧ್ಯಮಗಳೂ ಬರೆದಿವೆ. ನಾನು ಮಾಧ್ಯಮದವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ರಾಜ್ಯದಲ್ಲಿ ಅನೈತಿಕವಾದಂಥ, ಕಾನೂನುಬಾಹಿರವಾದಂಥ, ಶಾಂತಿ ಭಂಗವನ್ನು ಇಲ್ಲಿ ಉಂಟು ಮಾಡುವಂಥ ದುಷ್ಟಶಕ್ತಿಗಳು ಯಾವುದು ಕೆಲಸ ಮಾಡುತ್ತಿದೆಯೋ, ಸ್ಪಷ್ಟವಾಗಿ ಜನತೆಯ ಮುಂದೆ ಜಾಗೃತಿ ಮೂಡಿಸುವಂಥ ಪ್ರಯತ್ನವನ್ನು ಮಾಧ್ಯಮದವರು ಮಾಡುತ್ತಿದ್ದಾರೆ. ನಾನು ಮಾಧ್ಯಮವನ್ನು ಅಭಿನಂದಿಸುತ್ತೇನೆ. ಪ್ರಜಾಪ್ರಭುತ್ವದ ಈ ವ್ಯವಸ್ಥೆಯಲ್ಲಿ 4ನೇ ಅಂಗ ಎಂದು ಕರೆಸಿಕೊಂಡಿರುವ ಮಾಧ್ಯಮ ಅಂಗ, ಮಾಧ್ಯಮ ಕ್ಷೇತ್ರ, ಇವತ್ತು ರಾಜ್ಯದ ಆಗುಹೋಗುಗಳ ಬಗ್ಗೆ ಇವತ್ತು ಜನತೆಗೆ ಜಾಗೃತಿ ಮೂಡಿಸುವ, ಮಾಹಿತಿಗಳನ್ನು ಕೊಡುವಂಥ ಪ್ರಯತ್ನವನ್ನು ಚೆನ್ನಾಗಿ ಮಾಡುತ್ತಿವೆ. ನಾನು ಮಾಧ್ಯಮದವರನ್ನು ಅಭಿನಂದಿಸುತ್ತೇನೆ. ಚಟುವಟಿಕೆಗಳೇನಾಗುತ್ತಿವೆ ಎಂದು ದಿನ ಬೆಳಗಾದರೆ ಬರುತ್ತಿದೆ. ಕಳೆದ ಒಂದು ವಾರದಲ್ಲಿ 10 ರೇಪ್ ಪ್ರಕರಣ ಆಯಿತು. ಇದು ದಾಖಲಾಗಿರುವುದು ನಮ್ಮ ಸಮಾಜ ಹೇಗಿದೆ ಎಂದು ನಮಗೆ ಗೊತ್ತಿದೆ. ಇನ್ನೂ ಅದೆಷ್ಟು ಘಟನೆಗಳು ಆಗಿವೆಯೋ ಏನೋ. ನಮ್ಮ ಮಹಿಳೆಯರು, ನಮ್ಮ ಅಕ್ಕ ತಂಗಿಯರು, ನಮ್ಮ ತಾಯಂದಿರು, ನಮ್ಮ ಸಮಾಜದ ವ್ಯವಸ್ಥೆಯ ಕಾರಣದಿಂದಾಗಿ ಮಾನಕ್ಕೆ ಎಲ್ಲದಕ್ಕಿಂತ ಹೆಚ್ಚಿನ ಆದ್ಯತೆ, ಪ್ರಾಮುಖ್ಯತೆಯನ್ನು ಕೊಡುತ್ತಿರುವ ಕಾರಣದಿಂದಾಗಿ ಇನ್ನೆಷ್ಟು ಘಟನೆಗಳು ವರದಿಯಾಗದೇ ಇವೆಯೋ? ಈ ನಮ್ಮ Sub-Inspector ರೀತಿಯ Sub-Inspector ಇನ್ನೆಲ್ಲಿ ಇದ್ದಾರೇನೋ, ಕೇಸ್ ಅನ್ನು ದಾಖಲು ಮಾಡಿಕೊಳ್ಳದೇ, ಅದಕ್ಕೆ ಅಗತ್ಯವಾದ section ಗಳನ್ನು ಹಾಕದೇ ಇನ್ನೆಷ್ಟು ಪ್ರಕರಣಗಳು ಮುಚ್ಚಿಹೋಗುವಂತೆ ಮಾಡಿದವರು ಇನ್ನೆಲ್ಲಿ ಇದ್ದಾರೋ ಗೊತ್ತಿಲ್ಲ. ಆದರೆ, ಈ ಒಂದು ವಾರದಲ್ಲಿ 10 ರೇಪ್ ಪ್ರಕರಣ ಅಧಿಕೃತವಾಗಿ

ದಾಖಲಾಗಿರುವುದು ನಮ್ಮ ಮುಂದಿದೆ. 7 ಲೈಂಗಿಕ ಹಿಂಸೆ ಪ್ರಕರಣ ದಾಖಲಾಗಿರುವಂಥದ್ದು ಇದೆ. ಅಂದರೆ, ಈ ಒಂದು ವಾರದಲ್ಲಿ 17 ಪ್ರಕರಣಗಳು ನಮ್ಮ ಮಹಿಳೆಯರ ಮೇಲೆ ದೌರ್ಜನ್ಯ ಮಾಡುತ್ತಿರುವಂಥ ಪ್ರಕರಣಗಳು ಬೆಳಕಿಗೆ ಬಂದಿರುವಂಥವು ಇವೆ. ಬೆಳಕಿಗೆ ಬಾರದಿರುವಂಥವು ಅವು ಇನ್ನೆಷ್ಟು ಇವೆಯೋ ಗೊತ್ತಿಲ್ಲ. ನಾನು ಕೇವಲ, ಒಂದು ವಾರದ್ದು, 10 ದಿನಗಳದ್ದು ಹೇಳುತ್ತಿದ್ದೇನೆ. ಇದಕ್ಕೆ ಕಾರಣವೇನೆಂದು ನಾವು ಹುಡುಕಬೇಕಾಗಿದೆ. ಈ ರೀತಿ ಘಟನೆಗಳು ನಡೆಯುವುದಕ್ಕೆ ಕಾರಣವೇನು?

ಅಧ್ಯಕ್ಷರು:– ಕಾಗೇರಿಯವರೆ, ಒಂದು ಮಾತು ಕೇಳಿ. ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅರ್ಹತೆ ಪಡೆದಿದೆಯೋ, ಇಲ್ಲವೋ ಎನ್ನುವ ಬಗ್ಗೆ ಪ್ರಾರಂಭಿಕವಾಗಿ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಅದಕ್ಕೇ ಜೇವರ್ಗಿ ಘಟನೆ ಹೇಳಿದೆ.

ಅಧ್ಯಕ್ಷರು:– ಈಗ ಎಲ್ಲ ಹೇಳಿದ ಮೇಲೆ ಚರ್ಚೆಗೆ ಮತ್ತೇನು ಹೇಳುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಕ್ಷತಾ ಎನ್ನುವವಳು 7 ವರ್ಷಗಳ ಬಾಲಕಿ.

ಅಧ್ಯಕ್ಷರು:– ನನಗೇನೂ ಅರ್ಥವಾಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅವಳ ಮೇಲೆ ಅತ್ಯಾಚಾರವಾಯಿತು. 45 ವರ್ಷದ ಮೆಹಬೂಬ್ ಪಟೇಲ್ ಎನ್ನುವವರು ಅತ್ಯಾಚಾರ ಮಾಡಿದರು. ನೆಲೋಗಿ police station ನಲ್ಲಿ ಪ್ರಕರಣ ದಾಖಲಾಗಿದೆ. ಭೈರವೇಶ್ವರ ನಗರದಲ್ಲಿ ನಿನ್ನೆ ಮತ್ತು ಬರಿಸುವ ಔಷಧಿ ಸಿಂಪಡಿಸಿ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿರುವ ಘಟನೆಯಾಯಿತು. ಸಿಂಧಗಿಯಲ್ಲಿ 5 ವರ್ಷದ ಹಸುಳೆ ಮೇಲೆ 55 ವರ್ಷದ ವ್ಯಕ್ತಿ ಅತ್ಯಾಚಾರ ಮಾಡಿರುವ ಘಟನೆಯಾಯಿತು. ಕೋಲಾರದಲ್ಲಿರುವ ಅಂಬೇಡ್ಕರ್ ಕಾಲೋನಿಯಲ್ಲಿ ಮಾನಸಿಕ ಅಸ್ವಸ್ಥ ಹೆಣ್ಣುಮಗಳ ಮೇಲೆ ಪಕ್ಕದ ಮನೆಯವನಿಂದ

ಅತ್ಯಾಚಾರವಾಯಿತು. ಕೋಲಾರದಲ್ಲಿ ಇನ್ನೊಂದು ಘಟನೆಯಾಯಿತು. ಈ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುವುದಕ್ಕೆ ಬಹಳ ಮುಖ್ಯವಾದಂಥ ಕಾರಣ ಏನು ಎನ್ನುವುದನ್ನು ಈ ಸದನದಲ್ಲಿ ನಾವು ಬಹಳ ಜವಾಬ್ದಾರಿಯಿಂದ ಯೋಚಿಸಬೇಕಾಗಿದೆ. ಪಕ್ಷಾತೀತವಾಗಿ ಈ ಸದನದಲ್ಲಿರುವ ನಮಗ್ಯಾರಿಗೂ ಈ ರೀತಿಯ ಘಟನೆ ಆಗಿರುವುದು ನಾವು ತಲೆತಗ್ಗಿಸುವಂಥದ್ದು ಎನ್ನುವ ಭಾವನೆ ನಮ್ಮೆಲ್ಲರಲ್ಲಿದೆ. ನಾವು ಬೇರೆ ನೀವು ಬೇರೆ ಇಲ್ಲ. ಈ ರೀತಿಯ ಘಟನೆಯನ್ನು ನಾವ್ಯಾರೂ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಾವ್ಯಾರೂ ಸಮಾಜದ ವ್ಯವಸ್ಥೆಯನ್ನು ಕಾಪಾಡಬೇಕೆನ್ನುವ ಹೊಣೆಗಾರಿಕೆ ಜವಾಬ್ದಾರಿಯಲ್ಲಿದ್ದೇವೋ ನಾವ್ಯಾರೂ ಸಹ ಇದನ್ನು ಒಪ್ಪಿಕೊಳ್ಳುವುದಿಲ್ಲ, ನಾವೆಲ್ಲ ತಲೆತಗ್ಗಿಸತಕ್ಕಂಥ ಸ್ಥಿತಿ ನಿರ್ಮಾಣವಾಗಿದೆ. ಆದರೆ, ಇಂಥ ಸಂದರ್ಭದಲ್ಲಿ ರಾಜ್ಯದ ಜನ ಆತಂಕದಲ್ಲಿದ್ದಾರೆ, ನಮ್ಮ ಮಕ್ಕಳನ್ನು ಹೊರಗೆ ಕಳುಹಿಸಬೇಕೋ ಬೇಡವೋ ಶಾಲಾ–ಕಾಲೇಜುಗಳಿಗೆ ಕಳುಹಿಸಬೇಕೋ ಬೇಡವೋ ಎನ್ನುವಂಥ ಆತಂಕದಲ್ಲಿದ್ದಾರೆ. ನಿನ್ನೆ ಇಡೀ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಗಳು ನಡೆದಿವೆ. ಮಹಿಳೆಯರು, ತಂದೆ–ತಾಯಂದಿರು, ಬಂಧು–ಬಳಗದವರು ಶಿಕ್ಷಣ ಸಂಸ್ಥೆಗಳು ಹೇಗೆ ನಡೆದುಕೊಳ್ಳುತ್ತಿವೆ? ಅಥವಾ ಅಲ್ಲಿ ಏನೇನು ಚಟುವಟಿಕೆಗಳಾಗಿವೆ, ವಿದ್ಯಾರ್ಥಿಗಳು ಹೇಗೆ ಆತಂಕದ ದಿನವನ್ನು ದೂಡುತ್ತಿದ್ದಾರೆಂಬುದು ಗೊತ್ತಾಗಿದೆ. ಪಾಲಕರಿಗೆ ಮಕ್ಕಳನ್ನು ಶಾಲಾ–ಕಾಲೇಜುಗಳಿಗೆ ಕಳುಹಿಸುವುದಕ್ಕೆ ಹೆದರಿಕೆಯಾಗಿದೆ. ಈ ರೀತಿಯ ಆತಂಕದ ವಾತಾವರಣ ಸಮಾಜದಲ್ಲಿ, ರಾಜ್ಯದಲ್ಲಿ ಏನು ನಿರ್ಮಾಣವಾಗಿದೆಯೋ, ಇದರ ಬಗ್ಗೆ ನಾವು ಈ ಸದನದ ಮೂಲಕ ಸ್ಪಷ್ಟವಾದಂಥ ಸಂದೇಶ ಕಳುಹಿಸಬೇಕು. ಯಾರು ಅಪರಾಧಿಗಳಿದ್ದಾರೆ, ಯಾರು ಈ ರೀತಿ ಅತ್ಯಾಚಾರ ಅನಾಚಾರ ಮಾಡುವಂಥ ವ್ಯಕ್ತಿಗಳಿದ್ದಾರೋ ಅವರಿಗೆ ನಾವು ಇದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಎನ್ನುವಂಥ ಸ್ಪಷ್ಟವಾದ ಸಂದೇಶವನ್ನು ಕಳುಹಿಸಬೇಕು. ಆದರೆ, ಈ ಸಂದೇಶ ಕಳುಹಿಸುವುದು ಹೇಗೆ? ಆಡಳಿತ ಪಕ್ಷದವರಾದ ನೀವು ಹೇಳಬೇಕು. ಸರ್ಕಾರದ ಮುಖ್ಯಮಂತ್ರಿಗಳಾದ ತಾವು ಹೇಳಬೇಕು. ಗೃಹ ಸಚಿವರು ಹೇಳಿದರೆ, ಇಂದು ಗೃಹ ಸಚಿವರ ಮೇಲೆ

ನಂಬಿಕೆ ಇಲ್ಲ. ಗೃಹ ಸಚಿವರು ರಾಜೀನಾಮೆ ಕೊಡಬೇಕೆನ್ನುವ ವಾತಾವರಣ ಇಡೀ ರಾಜ್ಯದಲ್ಲಿದೆ. ಗೃಹ ಸಚಿವರಿಗೆ ನೈತಿಕವಾದಂಥ ಹೊಣೆಗಾರಿಕೆಯ ಜವಾಬ್ದಾರಿ ಈ ವಿಷಯದ ಮೇಲೆ ಮಾತನಾಡಲಿಕ್ಕಿಲ್ಲ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಈ ಸದನ ನಿಯಮಾವಳಿಗಳ ಪ್ರಕಾರ ಹೋಗಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:- ಮುಖ್ಯಮಂತ್ರಿಗಳು, ಗೃಹ ಸಚಿವರು ಆಮೇಲೆ ಉತ್ತರ ಕೊಡುತ್ತಾರೆ.

(ಗೊಂದಲ)

SRI. K.G.BOPAIAH:- Atrocities on women. ಅದು ಒಂದು ಅಥವಾ ಹಲವಾರು ಘಟನೆಗಳಿರಬಹುದು. ಇದರಲ್ಲಿ ಮೊನ್ನೆಯ subject ಕೂಡ ಇದೆ. ಇವತ್ತು ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎನ್ನುವ ವಿಚಾರದಲ್ಲಿ ನಾವು ನಿಲುವಳಿ ಸೂಚನೆ ತಂದಿರುವುದು ಅದರ ಘಟನೆಗಳು ಸಾಕಷ್ಟು ಇದೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ಚರ್ಚೆಗೆ ಅವಕಾಶ ಕೊಟ್ಟಾಗ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ಇದು ರೂಲ್ 60 purviewನಲ್ಲಿ ಬರುತ್ತದೆ ಎನ್ನುವುದಕ್ಕೆ ಹೇಳುತ್ತಿರುವುದು. ಬೇರೆ ಬೇರೆ ಕಳ್ಳತನ, ಹೊಡೆದಾಟ, ಇವುಗಳನ್ನು ಹೇಳುತ್ತಿಲ್ಲ. ಇಡೀ ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಹಿನ್ನೆಲೆಯಲ್ಲಿ ಉದಾಹರಣೆ ಹೇಳಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಬೋಪಯ್ಯನವರೆ ಇಲ್ಲಿ ಕೇಳಿ. ನೀವು ನಿಮ್ಮ ನೋಟೀಸ್‌ನಲ್ಲಿ ಕಂಡ ವಿಷಯಗಳನ್ನು ವಿಸ್ತೃತವಾಗಿ ಚರ್ಚೆ ಮಾಡುವ ಸಂದರ್ಭದಲ್ಲಿ ಒಂದೊಂದೇ ಏನೆಂದು ಹೇಳಿ. ಈಗ ಸಾಮಾನ್ಯವಾದಂಥ ನಾಲ್ಕು ಮಾತುಗಳನ್ನು ಹೇಳಿ, ಪ್ರಮುಖವಾಗಿರುವ ಅಂಶಗಳನ್ನು ಹೇಳಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:– ನಾವು ತಮ್ಮ ಮನವೊಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಈಗ ನಾವು ಏನು ಹೇಳಿದರೂ ಕೇಳುವ ಸ್ಥಿತಿಯಲ್ಲಿಲ್ಲ, ಏನು ಬೇಕಾದರೂ ಮಾಡಿಕೊಂಡು ಹೋಗಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಏಕೆ ಹೇಳುತ್ತಿದ್ದೇನೆಂದರೆ,

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:– Insecurity ಇದೆ ಎನ್ನುವುದನ್ನು ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು:– ಸುಮ್ಮನಿರಿ. ಸ್ವಾಮಿ, ನನಗೆ ಭಾಷಣ ಮಾಡುವುದಕ್ಕೆ ಬರುತ್ತದ, ಕನ್ನಡ ಗೊತ್ತಿದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಮುಗಿಸಿಬಿಡುತ್ತೇನೆ. ನಾನು ಮುಕ್ತಾಯದ ಕೊನೆಯ ಹಂತದಲ್ಲಿದ್ದೇನೆ. ಈಗ ಗೃಹ ಸಚಿವರು ಏಕೆ ಉತ್ತರ ಹೇಳಬಾರದೆಂದರೆ,

(ಗೊಂದಲ)

ಅಧ್ಯಕ್ಷರು:– ಅವರು ಹೇಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅವರಿಗ ನೈತಿಕತೆ ಇಲ್ಲ. ಉತ್ತರ ಹೇಳುವಂಥ ನೈತಿಕತೆ ಬೇಕಲ್ಲ.

(ಗೊಂದಲ)

ಶ್ರೀ ಜೆ.ಹೆಚ್.ಶ್ರೀನಿವಾಸ:– ಬಿಜೆಪಿಯವರಿಗೆ ನೈತಿಕತೆ ಇದೆಯೇ?

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:– ಅವರು ಹೇಳಿರುವುದನ್ನು withdraw ಮಾಡಿಕೊಳ್ಳಲಿ.

(ಗೊಂದಲ)

ಶ್ರೀ ಹೆಚ್.ಎಸ್.ಮಹಾದೇವ ಪ್ರಸಾದ್:– ನೈತಿಕತೆಯ ಬಗ್ಗೆ ನಮಗೆ ಹೇಳುವುದಕ್ಕೆ ಬರುತ್ತೀರಲ್ಲಾ?

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:– ನೀವು ಆ ರೀತಿ ಹೇಳುವುದು ಸರಿಯಲ್ಲ. ಗೃಹ ಸಚಿವರು ಉತ್ತರ ಕೊಡುತ್ತಾರೆ. ನೀವು ಅದನ್ನು withdraw ಮಾಡಿ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್:– ಪ್ರಾಸಂಗಿಕವಾಗಿ ಮಾತನಾಡಬಹುದಲ್ಲ.

(ಗೊಂದಲ)

ಅಧ್ಯಕ್ಷರು:– ಈಗಲ್ಲ. ಅವರು ಉತ್ತರ ಹೇಳದೇ ಹೋದರೆ, ಇದು ಪ್ರಾರಂಭಿಕವಾದ ಒಂದು ಪ್ರಸ್ತಾವನೆ, ಅವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಕೊಟ್ಟೇಕೊಡುತ್ತಾರೆ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:- ರಾಜ್ಯದ ಜನತೆಯಲ್ಲಿ ಆತಂಕ ವ್ಯಕ್ತವಾಗಿದೆ.

(ಗೊಂದಲ)

ಅಧ್ಯಕ್ಷರು:- ಬೊಮ್ಮಾಯಿರವರೆ, ನಾನು ಒಂದು ಮಾತು ಹೇಳುತ್ತೇನೆ ಕೇಳಿ. ನಾವೆಲ್ಲಾ ಜವಾಬ್ದಾರಿ ಸ್ಥಾನದಲ್ಲಿದ್ದೇವೆ.

(ಗೊಂದಲ)

ಶ್ರೀ ಕೆ.ಶಿವಮೂರ್ತಿ:- xxxxxx ಮಾಡಿಸಬೇಕೆಂದು ಅವರ ತಂತ್ರಗಾರಿಕೆ ಇದೆ.

(ಗೊಂದಲ)

ಅಧ್ಯಕ್ಷರು:- ರಾಜ್ಯದ ಜನತೆಯ ಮನಸ್ಸಿನಲ್ಲಿ ಇಲ್ಲದಿರತಕ್ಕಂಥದ್ದನ್ನು ನಾವು ಹುಟ್ಟು ಹಾಕುವುದಕ್ಕೆ ಹೋಗಬಾರದು. ವಸ್ತು ಸ್ಥಿತಿ ಏನಿದೆ ಅದನ್ನು ಹೇಳಬೇಕು. ನಮ್ಮ ರಾಜಕೀಯ ತೀಟೆಗೋಸ್ಕರ ಏನು ಬೇಕಾದರೂ ಹೇಳುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ಈ ರೀತಿಯ ಪ್ರಚೋದನಾಕಾರಿ ಹೇಳಿಕೆ ನೀಡುವುದು ದಾಖಲೆಗೆ ಹೋಗಬಾರದು. ಪ್ರಚೋಚನೆ ಮಾಡುತ್ತಿರುವವರು ನೀವೇ. ಯಾವುದೋ ಒಂದು ವರ್ಗದ ರಕ್ಷಣೆ ಮಾಡುವುದಕ್ಕೆ ಹೋಗುವುದೇ? xxxxxx ಎನ್ನುವ ಪದವನ್ನು expunge ಮಾಡಿ.

(ಗೊಂದಲ)

ಅಧ್ಯಕ್ಷರು:- ಆಯಿತು. ಬೇಗ ಹೇಳಿ. ಚರ್ಚೆಗೆ ತಂದ ಮೇಲೆ ಅದನ್ನು ಹೇಳಿ. ಈಗ ಈ ಚರ್ಚೆಗೆ ಅರ್ಹತೆ ಪಡೆದಿದೆಯೇ ಇಲ್ಲವೇ ಎನ್ನುವ ನಾಲ್ಕು ಮಾತು ಹೇಳುವುದು ಬಿಟ್ಟು ನೀವು ಬೇರೆ ಹೇಳಬಾರದು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:– xxxxxx ಎನ್ನುವ ಪದವನ್ನು ತೆಗೆಸಿ ಹಾಕಿ.

(ಗೊಂದಲ)

ಅಧ್ಯಕ್ಷರು:– ಶಿವಮೂರ್ತಿಯವರೆ, ಒಂದು ನಿಮಿಷ ಸ್ವಲ್ಪ ತಾಳಿ. Please. ನೀವು ಮಂಡಿಸಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:– ಈಗ ಏನು ನಡೆಯುತ್ತಿದೆ ಅದನ್ನು ಹೇಳುತ್ತಿದ್ದೇವೆಯೇ ಹೊರತು ಒಂದು xxx ಬಗ್ಗೆ particular ಆಗಿ ಹೇಳುತ್ತೇವೆಯೇ? ಏಕೆ ಹೀಗೆ ಪ್ರಚೋದನಕಾರಿ ಹೇಳಿಕೆ ಕೊಡುವುದು?

(ಗೊಂದಲ)

ಅಧ್ಯಕ್ಷರು:– ಈ ಸದನವನ್ನು ಸದುಪಯೋಗ ಪಡಿಸಿಕೊಳ್ಳಬೇಕು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:– ನಾವೂ ಎಲ್ಲಿಯೂ ಮಾತನಾಡಿಲ್ಲ. ಈ ರೀತಿಯಾಗಿ ನಡೆಯುತ್ತಿದೆ, ವೈಫಲ್ಯತೆಯಾಗುತ್ತಿದೆ, ಎಂದು ಹೇಳಿದರೆ ಅವರು xxxxxx ಎಂದು ಏಕೆ ಹೇಳುವುದು? ಅದನ್ನೂ ಕಡತದಿಂದ ತೆಗೆಸಿ ಹಾಕಿ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ:– xxxxxx ಎನ್ನುವುದನ್ನು ಕಡತದಿಂದ ತೆಗಿಸಿ ಹಾಕಿ. xxxxxx ಎಂದು ಯಾರೂ ಹೇಳಬಾರದು. ಆ ವಿಚಾರ ಯಾರೂ ಮಾತನಾಡಿಲ್ಲ. ಅದನ್ನು ತೆಗೆಯಿರಿ ಎಂದು ಹೇಳಿ.

(ಗೊಂದಲ)

ಅಧ್ಯಕ್ಷರು:– ಆಯಿತು ಬಿಡಿ, ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾನು ಈ ರಾಜ್ಯದಲ್ಲಿ ಪಕ್ಷಾತೀತವಾಗಿ ಎಲ್ಲಾ ಭೇದ ಭಾವಗಳನ್ನು ಮರೆತು ನಿನ್ನೆ ಇಂದು ನಡೆಯುತ್ತಿರುವಂಥ ಪ್ರತಿಭಟನೆಗಳನ್ನು ಉಲ್ಲೇಖಿಸಿದೆ. ಆ ಪ್ರತಿಭಟನೆಯ ಧ್ವನಿ ಏನೆಂದರೆ, ಗೃಹ ಸಚಿವರು ರಾಜೀನಾಮೆ ಕೊಡಬೇಕು. ಅವರಿಂದಾಗಿ (ಗೊಂದಲ) ಹೀಗಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ಬಗ್ಗೆ ವಿಸ್ತೃತವಾಗಿ ಈ ಸದನದಲ್ಲಿ ಚರ್ಚೆಯಾಗಬೇಕು.

(xxxxxx ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ)

(ಗೊಂದಲ)

ಶ್ರೀ ಕೆ.ಆರ್.ರಮೇಶ್ ಕುಮಾರ್:– I have got a point of order. Preliminary submissions ಮಾಡಬೇಕೆಂದು ತಮ್ಮ Chamberನಲ್ಲಿ ಕರೆದು ಮಾತುಕತೆಯಾಯಿತು. Preliminary submissionsಗೆ ಅವರಿಗೆ ಅವಕಾಶ ಕೊಡಿ ಎಂದು ನಾವು ಹೇಳಿದೆವು. ಅವರು conclude ಮಾಡಿಬಿಟ್ಟಿದ್ದಾರಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ:– Preliminary submission ಮಾತ್ರ ಮಾಡಿದ್ದು.

(ಗೊಂದಲ)

ಶ್ರೀ ಕೆ.ಆರ್.ರಮೇಶ್ ಕುಮಾರ್:– ಬೋಪಯ್ಯನವರೆ, I am trying to appeal to the Chair. I am on a point of order. Preliminary submission ಮಾಡುವಾಗ you will not go into material particulars. You will only raise the material facts. ಇಲ್ಲಿ material particulars, facts ಎಲ್ಲವನ್ನೂ conclude ಮಾಡಿಬಿಟ್ಟಿದ್ದಾರೆ. ಅವರ demand ಏನೆಂದು ಕೂಡ ಹೇಳಿಬಿಟ್ಟಿದ್ದಾರೆ. Preliminary submissionಗೆ ಬಾಕಿ ಇನ್ನೇನಿದೆ? ಅರಿಗೇನು

option ಇತ್ತು ಅದನ್ನು exhaust ಮಾಡಿದ್ದಾರಲ್ಲ. ಅವರ ultimate prayer ಏನಿತ್ತು, ತಮ್ಮನ್ನು ಒಪ್ಪಿಸುವುದಕ್ಕೆ, ಅವರೆಲ್ಲ conclude ಮಾಡಿದ ಮೇಲೆ is there still anything left for them to make submission againt? I want to know.

(ಗೊಂದಲ)

ಶ್ರೀ ವಿ.ಸುನೀಲ್ ಕುಮಾರ್:– ಪೀಠಿಕೆಗೆ ಗಾಬರಿಯಾಗಿ ಬಿಟ್ಟರೆ ಹೇಗೆ ಸಾರ್? ಉಳಿದವರು ಇನ್ನೂ ಚರ್ಚೆ ಮಾಡಬೇಕಲ್ಲವೇ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ರಮೇಶ್ ಕುಮಾರ್ ರವರು practice ಮಾಡುವ advocate ಅಲ್ಲವೆಂದು ಹೇಳಿ ಬಿಟ್ಟಿದ್ದಾರೆ. ಆದರೆ ಅವರಿಗೆ ಈ advocacy ಹೇಗೆ ಮಾಡಬೇಕೆನ್ನುವುದು ಚೆನ್ನಾಗಿ ಗೊತ್ತಿದೆ. ಯಾವಾವ ವಿಷಯವನ್ನು ಯಾವ ಕೇಸಿಗೆ ಸಂಬಂಧಪಟ್ಟ ಹಾಗೆ ಹೇಗೆ ಹೇಳಬೇಕೆನ್ನುವುದು ಗೊತ್ತಿದೆ.

(ಗೊಂದಲ)

ಶ್ರೀ ಕೆ.ಆರ್.ರಮೇಶ್ ಕುಮಾರ್:– I am sorry. ವಿಶ್ವೇಶ್ವರ್ ತಾವು ಹೇಳಿದಿರಿ, ನಾನು ಈ ಸದನಕ್ಕೆ ಐದು ಸಲ ಬಂದಿದ್ದೇನೆ. ಮಾತಿಗೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು:– ನೀವು ಮುಕ್ತಾಯ ಮಾಡುತ್ತೀರೋ ಇಲ್ಲವೋ ಹೇಳಿ.

(ಗೊಂದಲ)

ಶ್ರೀ ಕೆ.ಆರ್.ರಮೇಶ್ ಕುಮಾರ್:– ಬೋಪಯ್ಯನವರೆ, you be the judge in this matter. He has even concluded his submission. What is there left for preliminary submission?

ಅಧ್ಯಕ್ಷರು:– ಸಾಕು ಬಿಡಿ.

(ಗೊಂದಲ)

ಶ್ರೀ ಕೆ.ಆರ್.ರಮೇಶ್ ಕುಮಾರ್:– We have framed certain rules to govern ourselves. ನಾವು ಈ ಸದನದಲ್ಲಿ ಕೆಲವು ನಿಯಮಗಳನ್ನು ನಮ್ಮನ್ನು ನಿಯಂತ್ರಿಸಿಕೊಳ್ಳುವುದಕ್ಕೋಸ್ಕರ ಮಾಡಿರುವುದು. ಅವುಗಳನ್ನು ನಾವು ಗೌರವಿಸುತ್ತೇವೆಯೋ ಅಥವಾ ಗೌರವಿಸುವುದಿಲ್ಲವೋ? ಅಷ್ಟೇ. That is all the question.

ಶ್ರೀ ಕೆ.ಜಿ.ಬೋಪಯ್ಯ:– ಸನ್ಮಾನ್ಯ ಅಧ್ಯಕ್ಷರೆ, ಘಟನೆಯ ವಿವರಗಳ ಬಗ್ಗೆ ಸ್ವಲ್ಪ ಹೆಚ್ಚಿಗೆ ಹೇಳಿದ್ದಾರೆ. ಈ ಪ್ರಕರಣದ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕೆಂಬುದು ನಮ್ಮ ವಿನಂತಿ. ಈ ರೀತಿಯಾದ ಗಂಭೀರ ವಿಷಯ ಇರುವಾಗ ಒಂದಿಷ್ಟು ಚರ್ಚೆಗಳು ಹೆಚ್ಚಿಗೆ ಆಗಿವೆ. ನಾವು ಇಲ್ಲವೆಂದು ಹೇಳುವುದಿಲ್ಲ. ಆದರೆ, ಆ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು.

SRI. K.R.RAMES KUMAR:- Are you willing to honour the rules framed by this very House? If you don't care for that, I have absolutely no botheration. It is the headache of the Chair.

ಶ್ರೀ ಕೆ.ಜಿ.ಬೋಪಯ್ಯ:– ನಾನು ರೂಲ್ಸ್ ಪ್ರಕಾರವೇ ಹೇಳುತ್ತಿದ್ದೇನೆ. ಕಳೆದ ಒಂದು ವಾರದಿಂದ ನಡೆದಿರುವಂಥ ಈ ಘಟನೆಗಳ ಹಿನ್ನೆಲೆಯಲ್ಲಿ ಒಂದಿಷ್ಟು ವಿಷಯವನ್ನು ಹೇಳಿದ್ದಾರೆ.

ಅಧ್ಯಕ್ಷರು:– ಮಾನ್ಯ ಬೋಪಯ್ಯನವರೇ, ನಾನು ಹೇಳುವುದನ್ನು ಕೇಳಿ. ಯಾವ ಹಂತದಲ್ಲಿ relevant, ಯಾವುದು, irrelevant ಯಾವುದು ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಈ ಪ್ರಿಲಿಮನರಿ ಸಬ್‌ಮಿಷನ್‌ನಲ್ಲಿ ಪ್ರಸ್ತಾಪ ಮಾಡಿ ವಿವರ ಬೇಡ.

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ರಮೇಶ್ ಕುಮಾರ್‌ರವರು Point of Order ಎತ್ತಿದರು. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಈ ಘಟನೆಗಳ ಬಗ್ಗೆ ಜನರ ಭಾವನೆ ಏನಿದೆ ಅದನ್ನು ಹೇಳಿದ್ದಾರೆ.

ಅಧ್ಯಕ್ಷರು:- ಈ ಎಲ್ಲಾ ವಿಷಯವನ್ನು ಚರ್ಚೆ ಸಂದರ್ಭದಲ್ಲಿ ಹೇಳಿ.

ಶ್ರೀ ಕೆ.ಜಿ.ಬೋಪಯ್ಯ:- ಈ ವಿಷಯದ ಬಗ್ಗೆ ಹೇಳುವಾಗ ಒಂದಿಷ್ಟು ಹೆಚ್ಚಿಗೆ ಹೇಳಿದ್ದಾರೆ. ಹೇಳಿಲ್ಲವೆಂದು ನಾನು ಹೇಳುವುದಿಲ್ಲ. ಆದ್ದರಿಂದ, ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ಕೆಲವು ಸಂದರ್ಭದಲ್ಲಿ ಬಹಳ ಗಂಭೀರವಾದಂಥ ವಿಚಾರಗಳು ಇದ್ದಾಗ ಇಲ್ಲಿ ಅವಕಾಶ ಕೊಡಲಾಗಿದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್:- ಮಾನ್ಯ ಬೋಪಯ್ಯನವರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಗೃಹ ಮಂತ್ರಿಗಳು ರಾಜೀನಾಮೆಯನ್ನು ಕೇಳುವ demand ಇಟ್ಟು ವಿಷಯವನ್ನು conclude ಮಾಡಿದ ಮೇಲೆ ಚರ್ಚೆ ಮಾಡುವುದಕ್ಕೆ ಏನಿದೆ?

ಅಧ್ಯಕ್ಷರು:- ಚರ್ಚೆಗೆ ಮತ್ತೇನು ಇದೆ.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ:- ಮಾನ್ಯ ಅಧ್ಯಕ್ಷರೆ, ಜನರ ಭಾವನೆಯನ್ನು ಅವರು ಹೇಳಿದ್ದಾರೆಯೇ ಹೊರತು ಅವರು ಏನೂ ಕೇಳಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಗೃಹ ಸಚಿವರ ರಾಜೀನಾಮೆಯನ್ನು ಜನರು ಕೇಳುತ್ತಿದ್ದಾರೆಂದು ಅವರು ಹೇಳಿದ್ದಾರೆ. ನಾವು ರಾಜೀನಾಮೆಯನ್ನು ಕೇಳಿಲ್ಲ.

(ಗೊಂದಲ)

ಶ್ರೀ ಕೆ.ಆರ್.ರಮೇಶ್ ಕುಮಾರ್:- ನಿಮಗೆ ನಾನು ಸಹಾಯ ಮಾಡುತ್ತೇನೆ. ನೀವು ಮಾತನಾಡುವಾಗ ಅವರೊಬ್ಬರೇ ಉತ್ತರ ಕೊಟ್ಟರೆ ಸಾಲದು, additional ಆಗಿ ಮಾನ್ಯ ಸಿದ್ದರಾಮಯ್ಯನವರು ಸಹ ಕೊಡಬೇಕೆಂದು ಕೇಳಿ, ಚೆನ್ನಾಗಿರುತ್ತದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ನಾನು ಕೊನೆಯದಾಗಿ conclude ಮಾಡುವುದಕ್ಕೆ ಬಯಸುವುದೇನೆಂದರೆ, ನಾವು ಈ ಸದನದ ಮೂಲಕ ಒಂದು ಬಿಗುವಾದಂಥ ಸಂದೇಶವನ್ನು ಕಳುಹಿಸಬೇಕು. ಇಂಥ ಒಂದು ಗಂಭೀರವಾದಂಥ ವಿಷಯ ಮತ್ತು ಈ ರೀತಿಯಾದ ಘಟನೆಗಳನ್ನು ನಾವು ಸಹಿಸಿಕೊಳ್ಳುವುದಿಲ್ಲವೆಂಬ ಸಂದೇಶವನ್ನು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಂದ ಕಳುಹಿಸಿಕೊಡಬೇಕು. ಆದರೆ, ಈ ಸಂದೇಶ ಇದುವರೆಗೂ ಹೋಗುತ್ತಿಲ್ಲ. ಆದ್ದರಿಂದ, ನಾನು ಈ ವಿಚಾರವನ್ನು ಮತ್ತೆ ಮತ್ತೆ ಹೇಳತಕ್ಕಂಥ ಸ್ಥಿತಿ ಬಂದಿದೆ. ಆ ಇನ್‌ಸ್ಪೆಕ್ಟರ್ abscond ಆಗಿದ್ದಾನೆ. ಇದನ್ನು ನಾವು ನಂಬುವುದಕ್ಕೆ ಸಾಧ್ಯವೇ? ಈ ರೀತಿಯಾದರೆ ಸರ್ಕಾರ ಯಾವ ಸಂದೇಶ ಕಳುಹಿಸುತ್ತಿದೆ ಎಂದು ಅರ್ಥವಾಗುತ್ತದೆ? ಸರ್ಕಾರಿ ಕೆಲಸದಲ್ಲಿರುವ ಒಬ್ಬ ಇನ್‌ಸ್ಪೆಕ್ಟರ್ ಮೇಲೆ ನಿನ್ನೆ ದಿವಸ 166(ಎ) ಪ್ರಕಾರ FIR file ಮಾಡಿ ಕೇಸ್ ಬುಕ್ ಮಾಡುತ್ತೀರಿ. ಆದರೆ, ಆತ absconding ಆಗಿರುತ್ತಾನೆ. ಈ ರೀತಿಯಾದರೆ ಒಂದು ಒಳ್ಳೆಯ ಸಂದೇಶವನ್ನು ಕಳುಹಿಸಿದಂತೆ ಆಗುತ್ತದೆಯೇ? ಸರ್ಕಾರಕ್ಕೆ ಒಂದು ಜವಾಬ್ದಾರಿ ಇರಬೇಕಾಗುತ್ತದೆ. ಈ ರೀತಿ ಸಂದೇಶ ಹೋದರೆ ಜನರು ಏನೆಂದು ತಿಳಿದುಕೊಳ್ಳುತ್ತಾರೆ? ಮಕ್ಕಳನ್ನು ಶಾಲೆಗೆ ಹೇಗೆ ಕಳುಹಿಸುವುದು ಎಂಬ ಆತಂಕ ಮತ್ತು ಭಯಭೀತವಾದಂಥ ವಾತಾವರಣ ನಿರ್ಮಾಣವಾಗುತ್ತದೆ. ಬಿಗುವಾದಂಥ ಸಂದೇಶವೆಂದರೆ ಏನು? ಇನ್‌ಸ್ಪೆಕ್ಟರ್ absconding ಆಗಿರುವುದನ್ನು ಇಲ್ಲಿ ಕುಳಿತುಕೊಂಡಿರುವ ಆಡಳಿತ ಪಕ್ಷದ ಸದಸ್ಯರು ಒಪ್ಪುತ್ತೀರಾ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಇನ್ನೂ ಕೆಲವು ಮಾಹಿತಿಗಳು ಇವೆ. ಉಳಿದ ನಮ್ಮ ಮಾನ್ಯ ಸದಸ್ಯರು ಮಾತನಾಡುವಾಗ ಆ ಎಲ್ಲ ವಿಚಾರವನ್ನು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿಶ್ವನಾಥರವರೇ, ಮಾನ್ಯ ಸದಸ್ಯರೇ, ಹೊಡೆದಾಟಕ್ಕೆ ಬರುತ್ತೀರಾ? Be careful. ಎಲ್ಲರೂ ಕುಳಿತುಕೊಳ್ಳಿ. ತೋಳಿನ ಬಟ್ಟೆಯನ್ನು ಮಡಚಿಕೊಂಡು ಮಾತನಾಡುವುದೇನು? ತಾವುಗಳು ಏನೆಂದು ತಿಳಿದುಕೊಂಡಿದ್ದೀರಿ? ಆ ಕಡೆಯವರಿಗೂ ಸಹ ಹೇಳುತ್ತೇನೆ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಈ ಸದನದ ಮೂಲಕ ಒಂದು ಗಂಭೀರವಾದಂಥ ಸಂದೇಶ ಹೋಗಬೇಕೆಂಬ ಉದ್ದೇಶದಿಂದ ನಾನು ಮತ್ತೆ ಮತ್ತೆ ಆಗ್ರಹಿಸಿ ಹೇಳುವುದು ಏಕೆಂದರೆ, ಈ ರೀತಿ ತಪ್ಪು ಮಾಡಿರುವಂಥ ಇನ್‌ಸ್ಪೆಕ್ಟರ್ ಅನ್ನು ಬಂಧಿಸುವಂಥ ಸ್ಥಿತಿಯಲ್ಲಿ ನಿಮ್ಮ ಸರ್ಕಾರ ಇಲ್ಲ. ಹಾಗಾಗಿ ನಾನು ಹೇಳುವುದೇನೆಂದರೆ, ನೀವು ಇಲ್ಲಿ ಬಿಗುವಾಗಿ ಹೇಳಿದ್ದರೂ ಸಹ ತಪ್ಪು ಮಾಡಿರುವ ಇನ್‌ಸ್ಪೆಕ್ಟರ್ abscond ಆಗಿ ಓಡಾಡುತ್ತಿದ್ದಾನೆಂದು ಜನರಿಗೆ ಅನಿಸಿದರೆ ನಿಮ್ಮ ಮೇಲೆ ಏನು ವಿಶ್ವಾಸ ಮತ್ತು ಭರವಸೆ ಬರುತ್ತದೆ ಹಾಗೆಯೇ ಜನರಿಗೆ ಏನು ಸಂದೇಶ ಕಳುಹಿಸಿದಂತೆ ಆಗುತ್ತದೆ? ಇದಕ್ಕೆ ಏನು ಅರ್ಥ ಇರುತ್ತದೆ? ನೀವು ಏನೇನು ಮಾತನಾಡುತ್ತೀರೆಂದು ನಮಗೆ ಗೊತ್ತಿದೆ. ಆದರೆ, ನೀವು ಮಾತನಾಡುವುದನ್ನು ಕೃತಿಯಲ್ಲಿ ಮಾಡಿ ತೋರಿಸಿ. ಈ ರೀತಿಯಾದ ಘಟನೆಗಳು ಇವತ್ತು, ನಾಳೆ ದಿವಸ ಯಾವುದೂ ಕೂಡ ಆಗಬಾರದು. ಅದು ಮರುಕಳಿಸಬಾರದಂಥ ಒಂದು ಸಂದೇಶವನ್ನು ಕಳುಹಿಸಬೇಕೆಂದು ಹೇಳುತ್ತಾ ಈ ಬಗ್ಗೆ ವಿಸ್ತೃತವಾದಂಥ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಮಾನ್ಯ ಕಾಗೇರಿಯವರೇ, ನೀವು ಮಾತನಾಡಿರುವ ಧಾಟಿ ನೋಡಿದರೆ ಚರ್ಚೆಯನ್ನು ಪೂರ್ಣ ಮಾಡಿ ನೀವು ನಿಮ್ಮ ಅಂತಿಮ ನಿರ್ಧಾರವನ್ನು ಸರ್ಕಾರಕ್ಕೆ ತಿಳಿಸಿದಂಥ ರೀತಿಯಲ್ಲಿದೆ. ಆದ್ದರಿಂದ ಪುನಃ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡುವುದಕ್ಕೆ ನೀವು ಅವಕಾಶ ಕೊಡಬೇಕು.

ಅಧ್ಯಕ್ಷರು:– ಚರ್ಚೆ ಮಾಡುವುದಕ್ಕೆ ಏನು ವಿಷಯ ಉಳಿದಿದೆ ಹೇಳಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ನಾನು ಇಷ್ಟು ಮಾತನ್ನು ಹೇಳಿ ಇನ್ನೂ ನಮ್ಮ ಸದಸ್ಯರು ಮಾತನಾಡುವವರು ಇದ್ದಾರೆ. ಅವರಿಗೆ ಅವಕಾಶಕೊಡಬೇಕೆಂದು ಕೇಳಿಕೊಳ್ಳುತ್ತಾ ನನಗೆ ಈ ಒಂದು ಪ್ರಾಸ್ತಾವಿಕ ಮಾತನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಅಧ್ಯಕ್ಷರು:– ಈ ಬಗ್ಗೆ ಒಬ್ಬರು ಅಥವಾ ಇಬ್ಬರು ಹೇಳಿ ಸಾಕು.

ಶ್ರೀ ಅರವಿಂದ ಲಿಂಬಾವಳಿ(ಮಹದೇವಪುರ):– ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರವನ್ನು ಗಾರ್ಡನ್ ಸಿಟಿ ಮತ್ತು ಸಿಲಿಕಾನ್ ಸಿಟಿ ಎಂದು ಕರೆಯುತ್ತಾರೆ.

(ಗೊಂದಲ)

ಶ್ರೀ ಎಸ್.ಟಿ.ಸೋಮಶೇಖರ್:– ಮಾನ್ಯ ಅರವಿಂದ್ ಲಿಂಬಾವಳಿರವರೇ, ನೀವು ಸರಿಯಾಗಿ ಮಾತನಾಡಿದರೆ ನಾವು co-operate ಮಾಡುತ್ತೇವೆ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಅವರು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಅವರಿಗೆ ಹೇಳಿ. ಅವರುಗಳಿಗೆ ಏನಾಗಿದೆ? ಮಾತನಾಡುವುದಕ್ಕೂ ಅವಕಾಶ ಕೊಡದಿದ್ದರೆ ಹೇಗೆ?

(ಗೊಂದಲ)

ಶ್ರೀ ಎಸ್.ಟಿ.ಸೋಮಶೇಖರ್:– ಇಲ್ಲಿ ರೌಡಿಸಂ ಮಾಡುವುದಕ್ಕೆ ಬಂದಿದ್ದೀರಾ? ಕುಳಿತುಕೊಳ್ಳಿ ಸಾಕು.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸೋಮಶೇಖರ್‌ರವರೇ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ದಯವಿಟ್ಟು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ನಾವು ನಿಮ್ಮ ಛೇಂಬರ್‌ಗೆ ಬಂದು ಮಾತನಾಡುತ್ತೇವೆ. ಎಲ್ಲರೂ ತಲೆ ತಗ್ಗಿಸುವಂಥ ಘಟನೆಗಳು ಆಗುತ್ತಿವೆ. ನಾನು ಹೇಳುವುದನ್ನು ದಯವಿಟ್ಟು ಆಡಳಿತ ಪಕ್ಷದ ಸದಸ್ಯರು ಕೇಳಬೇಕೆಂದು ಕೇಳಿಕೊಳ್ಳುತ್ತೇನೆ. ಅವರಿಗೆ ಈ ಬಗ್ಗೆ ಮಾತನಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಅವರು ಆಡಳಿತ ಪಕ್ಷದಲ್ಲಿದ್ದಾರೆ. ಇದು ನಮಗೂ ಸಹ ಅರ್ಥವಾಗುತ್ತದೆ. ಅವರು ಆಡಳಿತ ಪಕ್ಷದಲ್ಲಿರುವುದರಿಂದ ಕೆಲವು ಮುಜುಗರ ತರುವಂಥ ವಿಚಾರಗಳನ್ನು ಮಾತನಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು:– ಆ ವಿಚಾರವೆಲ್ಲ ಹೇಳುವುದು ಬೇಡ. ಮುಂದಿನ ವಿಷಯ ಹೇಳಿ.

ಶ್ರೀ ಅರವಿಂದ ಲಿಂಬಾವಳಿ:– ಆದ್ದರಿಂದ, ವಿರೋಧಪಕ್ಷದಲ್ಲಿರುವ ನಾವು ಆ ವಿಷಯವನ್ನು ಮಾತನಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:– ನಾವೇನೂ ಸಮರ್ಥನೆ ಮಾಡಿಕೊಳ್ಳುತ್ತಿಲ್ಲ. ಹಾಗೆಯೇ ನಮಗೇನೂ ಮುಜುಗರ ಕೂಡ ಇಲ್ಲ.

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಅಧ್ಯಕ್ಷರೆ, ನಾನು ಯೀಲ್ಡ್ ಆಗಿಲ್ಲ. ಬೆಂಗಳೂರಿಗೆ ಗಾರ್ಡನ್ ಸಿಟಿ ಮತ್ತು ಸಿಲಿಕಾನ್ ಸಿಟಿ ಎಂದು ಹೆಸರು ಇದೆ. ಇತ್ತೀಚೆಗೆ ಬೆಂಗಳೂರಿಗೆ ಗಾರ್ಬೇಜ್ ಸಿಟಿ ಎಂದು ಹೆಸರು ಬಂದಿದೆ. ಈಗ ಬೆಂಗಳೂರನ್ನು ಕ್ರೈಂ ಸಿಟಿ ಎಂದು ಹೆಸರು ಮಾಡುತ್ತಿದ್ದಾರೆ.

ಶ್ರೀ ಬಿ.ಎ.ಬಸವರಾಜು:- ಗಾರ್ಡನ್ ಸಿಟಿ ನಿಮ್ಮಿಂದ ಆಗಿದೆ. ಅದನ್ನು ನೀವು ಮಾಡಿದ್ದೀರಿ. ಅದು ನಿಮ್ಮ ಕಾಲದಲ್ಲಿ ಆಯಿತು. ಅದರ ಪಿತೃ ನೀವು ಆಗಿದ್ದೀರಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಬಸವರಾಜುರವರೇ, ನೀವು ನನ್ನ ಒಳ್ಳೆಯ ಸ್ನೇಹಿತರು ದಯವಿಟ್ಟು ಕುಳಿತುಕೊಳ್ಳಿ. ಕಳೆದ ಮೂರು ದಿವಸಗಳ ಹಿಂದೆ ನನ್ನ ಕ್ಷೇತರದ ತೂಬರಹಳ್ಳಿ ಎಂಬ ಗ್ರಾಮದಲ್ಲಿ vibgyor ಸ್ಕೂಲ್ ಇದೆ. ಈ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇದಕ್ಕೆ ಮೂರು ದಿವಸಗಳಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ. 72 ಗಂಟೆಯಿಂದ ಇದಕ್ಕೆ ಉತ್ತರ ಸಿಗುತ್ತಿಲ್ಲ. ಅಲ್ಲಿ ಜನರು ಮತ್ತು ಪೋಷಕರು ರಸ್ತೆಗಿಳಿದು ಗಲಾಟೆ ಮಾಡುತ್ತಿದ್ದಾರೆ. ಆ ಶಾಲಾ ಸಿಬ್ಬಂದಿಗಳು ಕಂಡೀಷನ್ ಹಾಕಿ ಪೋಷಕರ ಹತ್ತಿರ ಸಹಿ ಹಾಕಿಸಿಕೊಳ್ಳುತ್ತಾರೆ. ಅದೇನೆಂದರೆ, ಯಾವುದೇ ಕಾರಣಕ್ಕೂ ಮಕ್ಕಳನ್ನು ಇಲ್ಲಿಗೆ ಸೇರಿಸಿದರೆ ಅವರ ರಕ್ಷಣೆಯನ್ನು ಮಾಡತಕ್ಕಂಥ ಜವಾಬ್ದಾರಿ ನಮ್ಮದಲ್ಲವೆಂದು ಸಹಿ ಹಾಕಿಸಿಕೊಂಡಿದ್ದಾರೆ. ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರಿಗೆ ಈ ವಿಷಯ ಗೊತ್ತಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು:- ಮಾನ್ಯ ಲಿಂಬಾವಳಿಯವರೇ, ಚರ್ಚೆ ಮಾಡುವಂಥ ಕಾಲದಲ್ಲಿ ಈ ವಿಷಯವನ್ನೆಲ್ಲ ಹೇಳಿ. ಈಗ ಪ್ರಾಥಮಿಕವಾಗಿ ವಿಷಯ ಸಲ್ಲಿಸಿ. ಒಂದು ಸಾಲಿನಲ್ಲಿ ಅಂದರೆ, ಇವೆಲ್ಲ ಪ್ರಕರಣದಿಂದ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಇದು ಚರ್ಚೆಗೆ ಯೋಗ್ಯವಾದ ವಿಷಯ

ಎಂದು ಮೊದಲು ಹೇಳಿ. ಉಳಿದವೆಲ್ಲವನ್ನೂ ಅಂದರೆ, adjectives, adverb ಅದು, ಇದು ಎಲ್ಲವನ್ನೂ ಆಮೇಲೆ ಹೇಳಿ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಡೀಟೇಲ್ಸ್‌ಗೆ ಹೋಗುತ್ತಿಲ್ಲ. ನಾನು ಏತಕ್ಕೆ ಹೇಳಿದೆ ಎಂದರೆ, ಈ ಘಟನೆ ಬಗ್ಗೆ ಕಳೆದ ಮೂರು ದಿವಸಗಳಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಈ ಬಗ್ಗೆ ನೀವು ಯಾವುದೇ ನೋಟೀಸ್ ಕೊಟ್ಟಿಲ್ಲವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಇದರಲ್ಲಿ ಅವರು sou motu statement ಕೊಡಬೇಕಾಗಿತ್ತು.

ಅಧ್ಯಕ್ಷರು:– ಮಾನ್ಯ ಲಿಂಬಾವಳಿಯವರೇ, ಪ್ರಾಥಮಿಕ ಪ್ರಸ್ತಾವನೆಯಲ್ಲಿ ಇವೆಲ್ಲ ಬರುವುದಿಲ್ಲ. ಈ ವಿಷಯ ಚರ್ಚೆಗೆ ಎಷ್ಟು ಪ್ರಸ್ತುತವಾಗಿದೆ ಎಂದು ಮತ್ತು ಈ ವಿಷಯ ಏತಕ್ಕೆ ಚರ್ಚೆ ಆಗಬೇಕಾಗಿದೆ ಎಂದು ಹೇಳಿ ಈ ಬಗ್ಗೆ ನಮಗೆ ಅವಕಾಶ ಕೊಡಿ ಎಂದು ಮಾತ್ರ ಕೇಳಿ. ಬೆಂಗಳೂರು ಹಾಗೆ ಹೀಗೆ ಎಂದು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ನಾನು ನಿಮ್ಮಂತೆ ಲಾ ಓದಿಲ್ಲ. Engineering ಓದಿದ್ದೇನೆ. ನನಗೆ ಕಾನೂನು ಅಷ್ಟೊಂದು ಗೊತ್ತಿಲ್ಲ. ದಯವಿಟ್ಟು ತಾವು ನನಗೆ ಮಾರ್ಗದರ್ಶನ ಮಾಡಬೇಕು.

(ಗೊಂದಲ)

ಅಧ್ಯಕ್ಷರು:– ನೀವೆಲ್ಲಾ ಅದೃಷ್ಟವಂತರು. ಶಾಸನಸಭೆಗೆ ಬಂದು ಮಂತ್ರಿಯಾಗಿ ಬಿಟ್ಟಿರಿ.

ಶ್ರೀ ಅರವಿಂದ ಲಿಂಬಾವಳಿ:– ಇಲ್ಲಾ ಅಧ್ಯಕ್ಷರೆ, ನಾನು ಎಂ.ಎಲ್.ಸಿ.ಯಾಗಿ ವಿರೋಧ ಪಕ್ಷದಲ್ಲಿ ಕುಳಿತಿದ್ದೆ.

ಅಧ್ಯಕ್ಷರು:– ಪ್ರಾರಂಭದಲ್ಲಿ ಏನು ಮಹತ್ವ ಇದೆ ಅಷ್ಟನ್ನು ಹೇಳಿ. ನೀವು ಹೇಳುವುದೆಲ್ಲ ಚರ್ಚೆಯ ಕಾಲದಲ್ಲಿ ವಿಸ್ತೃತವಾಗಿ ಹೇಳಿ.

ಶ್ರೀ ಅರವಿಂದ ಲಿಂಬಾವಳಿ:- ನಾನು details ಗೆ ಹೋಗುತ್ತಿಲ್ಲ. ಬೆಂಗಳೂರಿನಲ್ಲಿ ನಿನ್ನೆ ಘಟನೆ ಆಯಿತು.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಸಚಿವರು):- ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯಲ್ಲಿ ಇವರು convince ಮಾಡುವುದಕ್ಕೆ ಪ್ರಯತ್ನ ಪಟ್ಟಿಲ್ಲ. ಅವರು ಬರೀ details ಗೆ ಹೋಗುತ್ತಿದ್ದಾರೆ. Straight away ನಿಯಮ 69ರಲ್ಲಿ ತೆಗೆದುಕೊಳ್ಳಿ. ದಯಮಾಡಿ business ನಡೆಯುವುದಕ್ಕೆ ಅವಕಾಶ ಮಾಡಿಕೊಡಿ, ಚರ್ಚೆಗೆ ಅವಕಾಶ ಮಾಡಿಕೊಡಬೇಡಿ.

ಅಧ್ಯಕ್ಷರು:- 69ರಲ್ಲಿ ಚರ್ಚೆ ಮಾಡಿ.

ಶ್ರೀ ಅರವಿಂದ ಲಿಂಬಾವಳಿ:- ಸುಮ್ಮನೆ ಒಂದು ಲೈನ್ ಹೇಳಿಬಿಡೋಣ ಹಾಗಾದರೆ, ಅರ್ಥವಾಗುವ ತರಹ ಆದರೂ ಹೇಳಬೇಕಲ್ಲವೇ? ನಿನ್ನೆ ಘಟನೆ ನಡೆಯಿತು.

ಅಧ್ಯಕ್ಷರು:- ನೀವು ಬೇಡಿಕೆಯನ್ನು ಮಂಡಿಸಿ. ನೀವು ಕಥೆ ಕಟ್ಟಿಕೊಂಡು ಹೇಳಬಾರದು.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:- ಮಾತನಾಡುವುದಕ್ಕೆ ಅವಕಾಶವಿಲ್ಲವೆಂದರೆ, ಪ್ರಿಲಿಮಿನರಿ ಸಬ್‌ಮಿಷನ್ ಕೂಡ ಮಾಡುವುದು ಬೇಡ. Details ಕೂಡ ಹೇಳಬಾರದಾ?

(ಗೊಂದಲ)

ಅಧ್ಯಕ್ಷರು:- ನೀವು ಒಬ್ಬೊಬ್ಬರೇ ಅರ್ಧಗಂಟೆಯವರೆಗೆ ಮಾತನಾಡಿದರೆ ಸಮಯ ಎಲ್ಲಿಂದ ತರುವುದು? ನೀವು ಮಾತನಾಡುವುದು ಬೇಡವೆಂದು ಹೇಳಿಲ್ಲ. ಈ ಹಂತದಲ್ಲಿ ಎಷ್ಟು ಬೇಕು ಅಷ್ಟೇ ಹೇಳಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:– ನಾನು ವಿವರಕ್ಕೆ ಹೋಗುತ್ತಿಲ್ಲ. ನಿನ್ನೆ ಸಾಯಂಕಾಲ ಇಲ್ಲಿ ಸಭೆ ಆದ ಮೇಲೆ ಯಾವನೋ ಬಂದು ಪೆಪ್ಪರ್ ಎರಚಿಬಿಟ್ಟು ಒಳಗೆ ನುಗ್ಗಿ ಅವಳನ್ನು ಅತ್ಯಾಚಾರ ಮಾಡುತ್ತಾನೆ. ಅದು ಒಂದು ಪವಿತ್ರವಾದಂಥ ಜಾಗ. ಆ ಚರ್ಚ್ Seminary ನಲ್ಲಿ ಹೋಗಿಬಿಟ್ಟು ಈ ತರಹ ಒಂದು ಅತ್ಯಾಚಾರ ನಡೆಯುತ್ತದೆ. ಆದರೂ ಕೂಡ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ. ಇಂತಹ ಘಟನೆ ನಡೆಯಬಾರದು.

ಅಧ್ಯಕ್ಷರು:– ಚರ್ಚಿಗೆ ಬೆಂಕಿ ಹಚ್ಚಿದಾಗ.. ..

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:– ಯಾವುದು ಅಧ್ಯಕ್ಷರೆ, ಏನು ಅಂದಿರಿ.

(ಗೊಂದಲ)

ಅಧ್ಯಕ್ಷರು:– ಆಯಿತು ಹೇಳಿ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ತಮ್ಮ ಬಾಯಿಯಿಂದ ಈ ಮಾತು ಬರಬಾರದು. ಚೆನ್ನಾಗಿ ತಾವು defend ಮಾಡಿಕೊಳ್ಳುತ್ತಿದ್ದೀರಿ.

ಅಧ್ಯಕ್ಷರು:– ಹೌದಾ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಏನೇನು ಆಗಿದೆ ಅದನ್ನು ಚರ್ಚೆ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ.

ಅಧ್ಯಕ್ಷರು:– ಚರ್ಚೆ ಮಾಡುವ ಕಾಲದಲ್ಲಿ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ತಮ್ಮ ನಿಯಮಾವಳಿಯಲ್ಲಿ ಅವಕಾಶ ಇದೆ ಎಂದರೆ ಈಗಲೇ ಚರ್ಚೆ ಮಾಡೋಣ. ನಾವು ಅದಕ್ಕೆ ತಯಾರಾಗಿದ್ದೇವೆ.

ಅಧ್ಯಕ್ಷರು:– ಆಯಿತು, ಲಿಂಬಾವಳಿಯವರೆ, ಹೇಳಿ.

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರೆ, ಚರ್ಚ್‌ಗೆ ಬೆಂಕಿ ಹಾಕಿರುವ ವಿಷಯ ಈ ಸಬ್‌ಮಿಷನ್‌ದಲ್ಲಿ ಬರುವುದಿಲ್ಲ. ದಯವಿಟ್ಟು ಆ

ವಿಷಯ ಚರ್ಚೆಗೆ ತೆಗೆದುಕೊಳ್ಳುವುದಾದರೆ ನಾವು ಚರ್ಚೆಗೆ ಸಿದ್ಧ ಇದ್ದೇವೆ. ಈಗಿನದು ಅಲ್ಲ ಬೇಕಾದರೆ 1947 ರಿಂದ ಶುರು ಮಾಡೋಣ. ಯಾವ್ಯಾವ ಸಂದರ್ಭದಲ್ಲಿ ಏನೇನು ಘಟನೆಗಳು ದೇಶದಲ್ಲಿ ಆಗಿದೆ ಎಲ್ಲಾ ಚರ್ಚೆ ಮಾಡೋಣ. ಆದರೆ ನಾನು ಆ ವಿಷಯಕ್ಕೆ ಹೋಗುತ್ತಿಲ್ಲ. ಪವಿತ್ರವಾದ ಜಾಗದಲ್ಲಿ ಹೋಗಿ ಅತ್ಯಾಚಾರ ನಡೆಯುತ್ತದೆಂದರೆ ಸರ್ಕಾರ ನಿರೀಕ್ಷೆ ಮಾಡವುದು ಏನು? ನಮಗೆ notice ಕೊಡಿ ನಾವು ಉತ್ತರ ಕೊಡುತ್ತೇವೆ ಮೂರು ದಿವಸದಿಂದ ಜನ ರಸ್ತೆಗೆ ಇಳಿದು ಹೋರಾಟ ಮಾಡುತ್ತಿದ್ದಾರೆ. ಅದಕ್ಕೆ ಯಾವುದೇ ರೀತಿಯ ಉತ್ತರ ಸರ್ಕಾರ ಕೊಡುತ್ತಿಲ್ಲ. ಪದೇ ಪದೇ ನಾವು ಒತ್ತಾಯ ಮಾಡಿದರೂ ಕೂಡ ನಮಗೆ ಇಲ್ಲಿ ಉತ್ತರ ನಿರೀಕ್ಷೆ ಮಾಡುವುದಕ್ಕೆ ಆಗುತ್ತಿಲ್ಲ. ಅದಕ್ಕೋಸ್ಕರ ಇದರ ಬಗ್ಗೆ ಮಾನ್ಯ ಗೃಹ ಸಚಿವರು ಕಾಳಜಿ ವಹಿಸುತ್ತಿಲ್ಲ. ಅವರು ನಿರ್ಲಕ್ಷ್ಯ ತೋರಿಸುತ್ತಿದ್ದಾರೆ. ಅದಕ್ಕೆ ಅವರಿಗೆ ರಾಜೀನಾಮೆ ಕೊಡಿ ಎಂದು ಕೇಳುತ್ತಿರುವುದು. ಅದಕ್ಕೋಸ್ಕರ ನಾನು ಪ್ರಿಲಿಮಿನರಿ ಸಬ್‌ಮಿಷನ್ ವಿಷಯ ಆ ವ್ಯಾಪ್ತಿಯೊಳಗೆ ಬರುವುದಿಲ್ಲ. ದಯವಿಟ್ಟು ಚರ್ಚೆ ಮಾಡಬೇಡಿ. ರಾಜ್ಯದಲ್ಲಿ ಜನ ಈ ವಿಷಯದ ಬಗ್ಗೆ ರಸ್ತೆಗೆ ಇಳಿದು ಹೋರಾಟ ಮಾಡುತ್ತಿದ್ದಾರೆ. ಈಗ ಸದನ ನಡೆಯುತ್ತಿದೆ ನಾವು ಚರ್ಚೆ ಮಾಡದಿದ್ದರೆ ಜನ ತಪ್ಪು ಸಂದೇಶ ಕೊಡುತ್ತಾರೆ. ಅದಕ್ಕೋಸ್ಕರ ನಾನು ವಿನಂತಿಯನ್ನು ಮಾಡುತ್ತೇನೆ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್(ರಾಜಾಜಿನಗರ):- ಮಾನ್ಯ ಅಧ್ಯಕ್ಷರೆ, ಇವತ್ತು ನಿಯಮ 60ರ ಅಡಿಯಲ್ಲಿ ನಾವು ಒಂದು ಸೂಚನೆ ಕೊಟ್ಟು ನಿಮ್ಮಲ್ಲಿ ಪ್ರಾರ್ಥನೆ ಮಾಡುತ್ತೇವೆ, ಇದನ್ನು ನಿಲುವಳಿ ಸೂಚನೆಯಾಗಿ ನೀವು ತೆಗೆದುಕೊಳ್ಳಬೇಕು ಮತ್ತು ಚರ್ಚೆಗೆ ಅವಕಾಶ ಕೊಡಬೇಕು ಎಂದು. ಕಾರಣ ಏನು? ಕೆಲವು ದಿನಗಳಿಂದ ಇಡೀ ರಾಜ್ಯದಲ್ಲಿ ಪ್ರತಿ ದಿವಸ ಪತ್ರಿಕೆ ಯಾರು ನೋಡುತ್ತಾರೆ ಅವರಿಗೆ ಬರೀ ಆತಂಕ ಉಂಟಾಗುತ್ತಿದೆ. ವಿಶೇಷವಾಗಿ ಹೆಣ್ಣುಮಕ್ಕಳನ್ನು ಹೆತ್ತವರು ಶಾಲೆಗಳಿಗೆ, ಕಾಲೇಜಿಗೆ ಮತ್ತು ಕೆಲಸಕ್ಕೆ ಕಳುಹಿಸುವಾಗ ಇವತ್ತು ನಿಜವಾಗಲೂ ಕೂಡ ಆತಂಕಕ್ಕೆ ಒಳಗಾಗಿದ್ದಾರೆ. ಈ

ವಿಚಾರ ಬಂದಾಗ ಆಳುವ ಪಕ್ಷ, ವಿರೋಧ ಪಕ್ಷ ಆ ಒಂದು ಬೇಧ ಬೇಡ. ಈ ಆತಂಕದಲ್ಲಿ ನಾವೆಲ್ಲರೂ ಕೂಡ ಭಾಗಿಯಾಗಿದ್ದೇವೆ. ಇದು ಎಲ್ಲೂ ಕೂಡ ಆಗಬಾರದು. ನಾವೆಲ್ಲರೂ ಉತ್ತರ ಪ್ರದೇಶದಲ್ಲಿ ಆದಾಗ ಆಗುತ್ತಾ ಎನ್ನುತ್ತೇವೆ. ಅದು ನಮ್ಮ ಮನೆಯ ಬಾಗಿಲಿನ ಹೊಸ್ತಿಲಲ್ಲೇ ಆದರೆ, ಇವತ್ತು ಸರ್ಕಾರ ಇದೆ. ಸರ್ಕಾರ ಗಮನಿಸಬೇಕು. ಇವತ್ತು 6 ವರ್ಷದ ಬಾಲಕಿಯ ಮೇಲೆ ಒಂದು ಅತ್ಯಾಚಾರ, ಅದರ ವಿವರಗಳು. ಕ್ರಿಶ್ಚಿಯನ್ ಸೆಮಿನರಿಯಲ್ಲಿ ನನ್ ಆಗಬೇಕೆಂದು ಆ ಯುವತಿ ಯಾರು ಹೋಗಿದ್ದರು? ಆಕೆಯ ಮುಖಕ್ಕೆ ಸ್ಪ್ರೇ ಮಾಡಿ ಆಕೆಯ ಮೇಲೆ ಅತ್ಯಾಚಾರ. ಬುಧಿಮಾಂಧ್ಯ ಹುಡುಗಿಯ ಮೇಲೆ ಕೂಡ ಮಾನಭಂಗ, ಅತ್ಯಾಚಾರ, ಎಲ್ಲಿ ಹೋಗುತ್ತಿದ್ದೇವೆ? ಆ ಒಂದು ಗಂಭೀರ ವಿಷಯದ ಬಗ್ಗೆ ನಾವು ಚರ್ಚೆ ಮಾಡದೇ ಹೋದರೆ ಇನ್ನು ಯಾವ ವಿಚಾರದ ಬಗ್ಗೆ ಚರ್ಚೆ ಮಾಡಬೇಕು? ನಿಯಮ 60ರ ಅಡಿಯಲ್ಲಿ ಏಕೆ ಚರ್ಚೆ? ಸರ್ಕಾರ ಇದೆ, ಸರ್ಕಾರ ಒರಗಡೆ ಸಮಾಜಕ್ಕೆ ಎರಡು ಸ್ಪಷ್ಟ ಸಂದೇಶಗಳನ್ನು ಕಳುಹಿಸಬೇಕು. ಯಾವು potential ಅಪರಾಧಿಗಳು ಇದ್ದಾರೆ, ಅಪರಾಧಿಗಳ abettors ಇದ್ದಾರೆ? ಅವರಿಗೆ ಹೇಳಬೇಕು, ಹುಷಾರ್ ಸರ್ಕಾರ ಇದೆ ಎಂದು. ಸರ್ಕಾರ ಇದೆ ನಿಮ್ಮದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಬೇಕು. ನಾಗರೀಕ ಸಮಾಜಕ್ಕೆ ಸಂದೇಶ ಕಳುಹಿಸಬೇಕು. ನಾವು ಇದ್ದೇವೆ, ನೀವು ಗಾಭರಿಯಾಗಬೇಡಿ, ಆತಂಕ ಪಡಬೇಡಿ ಎಂದು ಹೇಳಬೇಕು. ಆದರೆ ಇವತ್ತು ದರುಂತ ನಾಗರೀಕ ಸಮಾಜ ಇವತ್ತು ಆತಂಕಕ್ಕೆ ಒಳಗಾಗಿದೆ. ಅಪರಾಧಿಗಳು ನಿರ್ಭಯವಾಗಿದ್ದಾರೆ. ಆ ಯುವತಿಯ ಮೇಲೆ ಅತ್ಯಾಚಾರ ಮಾಡಿದ ಅಪರಾಧಿ ಮೂರು ದಿವಸ ಆದಮೇಲೆ ಅದೇ ಏರಿಯಾದಲ್ಲಿ ರಾಜಾರೋಷವಾಗಿ ಓಡಾಡುತ್ತಾನೆ. ಆ ಯುವತಿಯ ಗೆಳೆಯ ಅದನ್ನು ಕಂಡು ಹಿಡಿದು ಪೊಲೀಸ್‌ನವರಿಗೆ ಹೇಳುತ್ತಾನೆ. ಇವತ್ತು ಪೊಲೀಸ್ ಇನ್ಸ್‌ಪೆಕ್ಟರೇ ಮಾಯಾ. ಈ ತರಹ ಇದ್ದಾಗ, ಅಪರಾಧಿಗಳಿಗೆ ಅನಿಸುತ್ತದೆ. ಸರ್ಕಾರ ಇಲ್ಲ ಪರವಾಗಿಲ್ಲ ಅನಿಸುತ್ತದೆ. ಸಜ್ಜನ ನಾಗರೀಕ ಸಮಾಜಕ್ಕೆ. ಸರ್ಕಾರ ಇಲ್ಲವೇನೋ ಅಂತ ಅನಿಸುತ್ತದೆ. ಇದರ ಬಗ್ಗೆ ನಾವು ಇವತ್ತು ಗಂಭೀರವಾಗಿ ಯೋಚನೆ ಮಾಡಬೇಕು. ಪ್ರತಿದಿವಸ ಪತ್ರಿಕೆ ಓದಿದಾಗ ಇವತ್ತು ಏನು ಸುದ್ದಿ ಎಂದು ಗಾಬರಿಯಿಂದ ನೋಡಬೇಕಾಗಿದೆ. ಮಾನ್ಯ

ಮುಖ್ಯಮಂತ್ರಿಗಳು ಇಲ್ಲಿಯೇ ಕುಳಿತಿದ್ದಾರೆ. ಮುಖ್ಯಮಂತ್ರಿಗಳೆ, ಆ 6 ವರ್ಷದ ಬಾಲಕಿಯ ತಂದೆ-ತಾಯಿಯ ಸ್ಥಿತಿ ಅಥವಾ ಅದೇ ಕ್ಲಾಸಿನಲ್ಲಿ ಓದುತ್ತಿರುವ ಮಕ್ಕಳ ತಂದೆ-ತಾಯಿಯವರ ಸ್ಥಿತಿ. ಇದೆಲ್ಲಾ ಆಗುವಾಗ ಈ ಸದನದಲ್ಲಿ ನಿಯಮ 60ರ ಅಡಿಯಲ್ಲಿ ನಾವು ಮಾತನಾಡುವುದೇ ಇನ್ನು ಯಾವಾಗ ಮಾತನಾಡಬೇಕು? ಅದಕ್ಕೋಸ್ಕರ ನಾನು ನಿಮ್ಮಲ್ಲಿ ಕಳಕಳಿಯಿಂದ ಕೇಳುವುದು. ಸರ್ಕಾರ ಎನ್ನುವುದು ಇದ್ದರೆ ಈ ಸಂದೇಶವನ್ನು ಕಳುಹಿಸುತ್ತೇವೆನ್ನುವ ವಿಶ್ವಾಸ ಇದ್ದರೆ ಇದನ್ನು ದಯವಿಟ್ಟು ಚರ್ಚೆಗೆ ತೆಗೆದುಕೊಳ್ಳಿ. ಚರ್ಚೆಗೆ ತೆಗೆದುಕೊಂಡು ಈ ಸದನದಿಂದ ಸಂದೇಶವನ್ನು ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಬೋಪಯ್ಯನವರೆ, ನಿಮ್ಮ ಪಕ್ಷದಿಂದ ಮೂರು ಜನ ಮಾತನಾಡಿದ್ದರೆ ಸಾಕು.

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ನಾನು ಎರಡೇ ನಿಮಿಷ ಮಾತನಾಡುತ್ತೇನೆ.

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಒಳಗಡೆ ಮೂರು ಜನ ಮಾತನಾಡುತ್ತೇವೆಂದು ಇಲ್ಲಿ ಬಂದು ಎರಡೆರಡು ನಿಮಿಷ ಎಂದು ಎಲ್ಲರೂ ಮಾತನಾಡುವುದು ಏನಿದು. ಒಳಗಡೆ ಬಂದು ಒಪ್ಪಿಕೊಳ್ಳುತ್ತೀರಿ ಇಲ್ಲಿ ಬಂದು ಏನೋ ಹೇಳುತ್ತೀರ. ಆ ರೀತಿ ಇಲ್ಲಾ ಇಲ್ಲಾ.

ಅಧ್ಯಕ್ಷರು:- ಬೋಪಯ್ಯನವರೆ, ನೀವು ಆ ಮೇಲೆ ಮಾತನಾಡಿ.

ಶ್ರೀ ವೈ.ಎಸ್.ವಿ.ದತ್ತಾ(ಕಡೂರು):- ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲಿಗೆ ನಾನು ಒಂದು ವಿನಮ್ರವಾದಂತಹ ನಿವೇದನೆಯನ್ನು ಇಡೀ ಎಲ್ಲಾ ಸದಸ್ಯರ ಪರವಾಗಿ ಸದನಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವಾಗಲೂ ಕೂಡ ಮಾಧ್ಯಮಗಳಲ್ಲಿ ನಾವು ಎಷ್ಟು ಜೋರಾಗಿ ಕಿರುಚಿದರೆ, ಎಷ್ಟು ಜೋರಾಗಿ ಗಲಾಟೆ ಮಾಡಿದರೆ ಪ್ರಚಾರ ಸಿಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಈ ಚರ್ಚೆಯನ್ನು ಆ ದೃಷ್ಟಿಯಿಂದ ಪರಿಗಣಿಸುವುದರ ಬದಲಿಗೆ ಇದರಲ್ಲಿ ನಮ್ಮೆಲ್ಲರ ರಾಜಕೀಯ ಲಾಭ-ನಷ್ಟಗಳನ್ನು ದೂರ ಬದಿಗೊತ್ತಿ ಸಮಸ್ಯೆಯ

ಗಂಭೀರತೆ ಮತ್ತು ಅದಕ್ಕೆ ಪರಿಹಾರ ಹುಡುಕುವುದಕ್ಕೆ ಈ ಸದನ ಒಂದು ಪ್ರಧಾನ ಭೂಮಿಕೆ ಮತ್ತು ವೇದಿಕೆ ಆದರೆ ಮಾತ್ರ ಆಗ ಜನರಲ್ಲಿ ವಿಶ್ವಾಸ ಮೂಡುತ್ತದೆ. ಇಲ್ಲವೆಂದರೆ ನಾವು ಇಂತಹ ವಿಷಯಗಳನ್ನು ಕೇವಲ ಆ ಘಳಿಗೆಯ ಉನ್ಮಾದಕ್ಕೆ, ಆವೇಶಕ್ಕೊಳಪಡಿಸಿಕೊಂಡು ಅದರೊಳಗೆ ತತ್ಕಾಲೀನ ರಾಜಕೀಯ ಲಾಭ ಮಾಡುವುದನ್ನು ಯಾರೂ ಮಾಡಬಾರದು.

ಅಧ್ಯಕ್ಷರು:- ಅವೆಲ್ಲಾ ಆಮೇಲೆ ಚರ್ಚೆ ಕಾಲದಲ್ಲಿ ಹೇಳಿ. ಯಾವ ವಿಚಾರದಲ್ಲಿ ನಿಲುವಳಿ ಸೂಚನೆಗೆ ಕೊಟ್ಟಿದ್ದೀರಿ, ಎಷ್ಟರ ಮಟ್ಟಿಗೆ ಇದು ಸಾರ್ವಜನಿಕ ಪ್ರಾಮುಖ್ಯತೆ ಪಡೆದಿದೆ. ಆ ವಿಚಾರ ಹೇಳಿ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತಾ:- ಅವರಿಗೆ ಹೇಳಿ. ನೀವು ಹೇಳಿದ್ದನ್ನು ನಾನು ಹೇಳುವುದಕ್ಕೆ ಬಿಡಿ.

ಅಧ್ಯಕ್ಷರು:- ಸುಮ್ಮನಿರಿ ಸಾಕು.

ಶ್ರೀ ವೈ.ಎಸ್.ವಿ.ದತ್ತಾ:- ಆ ಕಾರಣಕ್ಕೆ ಈ ವಿಷಯದಲ್ಲಿ ನಾನು ನಿಲುವಳಿ ಸೂಚನೆ 60ರ ಅಡಿಯಲ್ಲಿ ಏಕೆ ಈ ಪ್ರಕರಣವನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ನಿರ್ದಿಷ್ಟವಾದ ಪ್ರಕರಣ ಕೊಟ್ಟಿದ್ದೇನೆ. ನಾನು ಇನ್ನುಳಿದ ವಿಷಯಗಳಿಗೆ ಹೋಗುವುದಿಲ್ಲ. ಮಾರತ್‌ಹಳ್ಳಿಯ ವಿಬ್‌ಗಯಾರ್ ಎನ್ನುವ ಶಾಲೆಯಲ್ಲಿ, ಶಾಲೆ ನಡೆಯುತ್ತಿದ್ದಾಗಲೇ, ತರಗತಿ ನಡೆಯುತ್ತಿದ್ದಾಗಲೇ ಅಲ್ಲಿ ಒಬ್ಬಳು ವಿದ್ಯಾರ್ಥಿನಿಯ ಮೇಲೆ ಆಗಿರುವಂತಹ ಒಂದು ಲೈಂಗಿಕ ಅತ್ಯಾಚಾರದ ಪ್ರಕರಣ, ಅದು ಎರಡು ವಾರಗಳ ಬಳಿಕ ಪ್ರಕರಣ ಬೆಳಕಿಗೆ ಬಂದಿದೆ. ಇದೂ ಕೂಡ ಎಲ್ಲೋ ಒಂದು ಕಡೆಯಲ್ಲಿ ಪ್ರಕರಣವನ್ನು ಮುಚ್ಚಿಹಾಕುವಂತಹ ಪ್ರಯತ್ನ ನಡೆದಿತ್ತು ಎನ್ನುವುದೂ ಕುಡ ಅದರ ಹಿನ್ನೆಲೆಯೊಳಗೆ ಎದ್ದು ಕಾಣುವಂತಹ ಅಂಶವಾಗಿದೆ. ಎಲ್ಲೋ ಪ್ರಕರಣ ಮುಚ್ಚಿಹಾಕಿಬಿಡೋಣ ಎನ್ನುವ ಪ್ರಯತ್ನದಲ್ಲಿ ಒಂದು ದಿನ ಆ ಮಗುವಿನ ತಾಯಿ ಹೇಳಿದ್ದು.

ಅಧ್ಯಕ್ಷರು:- Details ಬೇಡ.

ಶ್ರೀ ವೈ.ಎಸ್.ವಿ.ದತ್ತಾ:- ಮಾನ್ಯ ಅಧ್ಯಕ್ಷರೆ, ನಾನು details ಗೆ ಹೋಗುತ್ತಿಲ್ಲ. ಆದರೆ ಮುಖ್ಯವಾಗ ಎರಡು ಗಂಭೀರವಾಗಿ ಗಮನಿಸಬೇಕಾದ ಸಂಗತಿ ಎಂದರೆ, ನಿನ್ನೆ ಹೈಕೋರ್ಟ್‌ನಲ್ಲಿ ಈ ಒಂದು ಲೈಂಗಿಕ ಅತ್ಯಾಚಾರದ ಪ್ರಕರಣಗಳು ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ವಿಚಾರ ಉಲ್ಲೇಖವಾಗಿದೆ.

ಅಧ್ಯಕ್ಷರು:- ಯಾರು ನೀವು ಪ್ರಸ್ತಾಪ ಮಾಡಿದ ವಿಚಾರನಾ?

ಶ್ರೀ ವೈ.ಎಸ್.ವಿ.ದತ್ತಾ:- ಹೌದು. ಮಾರತ್‌ಹಳ್ಳಿ ಪ್ರಕರಣದಲ್ಲಿ.

ಶ್ರೀ ಕೆ.ಎಸ್.ಮಂಜುನಾಥಗೌಡ:- ಮಾಲೂರಿನಲ್ಲಿಯೂ ಜಾಸ್ತಿಯಾಗಿದೆ.

ಶ್ರೀ ವೈ.ಎಸ್.ವಿ.ದತ್ತಾ:- ಮಾನ್ಯ ಮಂಜುನಾಥರೆ ಕುಳಿತುಕೊಳ್ಳಿ. ಮಾರತ್‌ಹಳ್ಳಿ ಪ್ರಕರಣದೊಳಗೆ ಮುಖ್ಯವಾಗಿ ಗಮನಿಸಬೇಕಾಗಿರುವುದು ಇದರ ಉನ್ನತ ಪೊಲೀಸ್ ಅಧಿಕಾರಿಯಾಗಿರುವಂತಹ ಡಿ.ಸಿ.ಪಿ. ಶರತ್‌ಚಂದ್ರರವರು ಹೇಳಿರುವ ಮಾತು ಇವತ್ತು ನನಗೆ ಬಹಳ ಈ ಸಮಸ್ಯೆಯ ಗಂಭೀರತೆಯನ್ನು ಎತ್ತಿ ತೋರಿಸುತ್ತದೆ. ಆ ಕಾರಣಕ್ಕೆ ನಾವು ಒಂದು ವಿಷಯವನ್ನು ಗಮನಿಸಬೇಕಾಗುತ್ತದೆ.

ಅಧ್ಯಕ್ಷರು:- ಮಾನ್ಯ ದತ್ತಾರವರೆ, . .

ಶ್ರೀ ವೈ.ಎಸ್.ವಿ.ದತ್ತಾ:- ಸಾರ್ ಅವರಿಗೆ ಮಾತನಾಡಲು ಅಷ್ಟೊಂದು ಅವಕಾಶ ಕೊಡುತ್ತೀರಿ.

ಅಧ್ಯಕ್ಷರು:- ಒಂದು ನಿಮಿಷ ಕೇಳಿ.

ಶ್ರೀ ವೈ.ಎಸ್.ವಿ.ದತ್ತಾ:- ಸಾರ್ ಒಂದು ನಿಮಿಷ ನಾನು ಹೇಳುತ್ತೇನೆ. ನನಗೆ *preliminary* submission ಎಷ್ಟು ಮಾಡಬೇಕು? ಯಾವ ವಿಷಯದ ಬಗ್ಗೆ ಮಾಡಬೇಕೆಂದು ಗೊತ್ತಿದೆ. ನಾನು conclusion ಗೂ ಹೋಗುತ್ತಿಲ್ಲ, ಚರ್ಚೆಯನ್ನು ಎಳೆದುಕೊಂಡೂ ಹೋಗುತ್ತಿಲ್ಲ. ಆದರೆ ಒಟ್ಟಿನಲ್ಲಿ ಜನರಿಗೆ, ಪೋಷಕರಿಗೆ ಇವತ್ತು ದೊಡ್ಡ ಆತಂಕ ಕಾಡುತ್ತಿದೆ. ಅವರು ಮಕ್ಕಳನ್ನು ಇನ್ನು ಮುಂದೆ ಶಾಲೆಗೆ ಕಳುಹಿಸಬಾರದು ಎಂದು ಇದ್ದಾರೆ.

ಅಧ್ಯಕ್ಷರು:– ಅದು ಯಾವಾಗ ಎನ್ನುವುದು ನೀವು ಚರ್ಚೆಯ ಕೊನೆಯಲ್ಲಿ ಹೇಳುವ ಮಾತು. ಈಗ ಅಲ್ಲ.

ಶ್ರೀ ವೈ.ಎಸ್.ವಿ.ದತ್ತಾ:– ಇಂತಹ ಪ್ರಕರಣಗಳು ನಡೆಯುತ್ತಿದ್ದಾಗ ನಾಳೆ ತಕ್ಷಣಕ್ಕೆ, ಈ ಘಳಿಗೆ ಒಂದು ಸಂದೇಶ ಈ ಸದನದಿಂದ ರವಾನೆಯಾಗಬೇಕಾಗಿದೆ.

(ಗೊಂದಲ)

ಅಧ್ಯಕ್ಷರು:– ಆದ್ದರಿಂದ ಚರ್ಚೆ ಮುಖ್ಯ. ಮಾನ್ಯ ಚೆಲುವರಾಯಸ್ವಾಮಿಯವರೆ ಮಾತನಾಡಿ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತಾ:– ಇಲ್ಲ. ಇಲ್ಲಿ ಸರ್ಕಾರ, ಸದನ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ, ಹಾಗಾಗಿ ಈ ತಕ್ಷಣದಿಂದಲೇ ಸರ್ಕಾರ ಕಾರ್ಯೋನ್ಮುಖವಾಗಿದೆ ಎಂಬ ಸಂದೇಶ ಹೋದರೆ ಆಗ ಮಕ್ಕಳಿಗೆ, ಪೋಷಕರಿಗೆ ಒಂದು ಭದ್ರತೆಯ ವಾತಾವರಣ ನಿರ್ಮಾಣವಾಗುತ್ತದೆ. ಆ ಕಾರಣಕ್ಕೆ ನಾವು ಏಕೆ ಇದನ್ನು ಹೀಗೆಯೇ ತೆಗೆದುಕೊಂಡು ಚರ್ಚೆ ಮಾಡಬೇಕೆಂದು ಮನವರಿಕೆ ಮಾಡಿಕೊಡುತ್ತಿದ್ದೇವೆ ಎಂದರೆ, ಸರ್ಕಾರ ಇದರೊಳಗೆ ಎಷ್ಟರಮಟ್ಟಿಗೆ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ, ಎಷ್ಟರಮಟ್ಟಿಗೆ ತುರ್ತಾಗಿ ಕಾರ್ಯೋನ್ಮುಖವಾಗಿದೆ ಎಂದು ಗೊತ್ತಾಗಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:– ಸಾಕು. ಇದು ಯಾವ ನಮೂನೆಯೋ? ದೇವರೇ?

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತಾ:– ಸುಮ್ಮನೆ ನಾವು ಕೇಳಿದೆವು, ಮಾನ್ಯ ಬೋಪಯ್ಯನವರು ಕೇಳಿದರು ಎಂದು ಆಗಬಾರದು. ಆ ಕಾರಣಕ್ಕೆ ನಾನು ಹೇಳುತ್ತಿದ್ದೇನೆ. ದಯವಿಟ್ಟು ಇದನ್ನು ನಿಯಮ 60ರ ಅಡಿಯಲ್ಲಿ

ತೆಗೆದುಕೊಳ್ಳಬೇಕು. ಇದು ಗಂಭೀರವಾಗಿ ಚರ್ಚೆಯಾಗಬೇಕು. ಇದರ ಎಲ್ಲಾ ಮಗ್ಗಲುಗಳ ಬಗ್ಗೆ ಚರ್ಚೆಯಾಗಬೇಕು. ನಿನ್ನೆ ಕೂಡ ಪೊಲೀಸ್ ಇಲಾಖೆಯ ಅಧಿಕಾರಿಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆ ಕಾರಣಕ್ಕಾಗಿ ದಯವಿಟ್ಟು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು:- ಆಯಿತು ಮಾನ್ಯ ದತ್ತಾರವರೆ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಚೆಲುವರಾಯಸ್ವಾಮಿಯವರೆ ಮಾತನಾಡಿ.

ಶ್ರೀ ಎನ್.ಚೆಲುವರಾಯಸ್ವಾಮಿ(ನಾಗಮಂಗಲ):- ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಪಕ್ಷ ಹಾಗೂ ಬಿ.ಜೆ.ಪಿ. ಪಕ್ಷದವರು ಇಬ್ಬರೂ ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲಿ ಮಾತ್ರ crime ಆಗುತ್ತಿದೆ. ಹಿಂದೆ ಆಗಿಲ್ಲ ಎಂದು ನಾನು ವಾದ ಮಾಡಿ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳುವುದಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಬಿಹಾರನಲ್ಲಿ ಪ್ರಾರಂಭವಾಗಿದ್ದು, ಬಿಹಾರ ಮುಖ್ಯಮಂತ್ರಿಗಳು ಕರ್ನಾಟಕದಲ್ಲೂ ಆಗುತ್ತಿದೆ ನಮ್ಮದು ಒಂದೇ ಅಲ್ಲ ಎನ್ನುವ ಮಟ್ಟಕ್ಕೆ ಇವತ್ತು ಪರಿಸ್ಥಿತಿ ಹೋಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಇದು ದಿನೇ ದಿನೇ ಜಾಸ್ತಿಯಾಗುತ್ತಿದೆ. ಕಡಿಮೆ ಆಗುತ್ತಿಲ್ಲ. ಆಕಸ್ಮಿಕವಾದಂಥ ಘಟನೆ ಎಂದು ಪರಿಗಣಿಸುವಂತಹ ಪರಿಸ್ಥಿತಿಯಲ್ಲಿ ನಾವು ಯಾರೂ ಇಲ್ಲ. ಜನರೂ ಇಲ್ಲ. ಮಕ್ಕಳು ಮೇಲೆ ಕುಳಿತು ಸದನ ವೀಕ್ಷಿಸುತ್ತಿದ್ದಾರೆ ಅವರೂ ಕೂಡ ಆತಂಕದಿಂದ ಹೊರಗಡೆ ಬರುವಂತಹ ಒಂದು ಆತ್ಮಸ್ಥೈರ್ಯವನ್ನು ನಾವು ಇಲ್ಲಿ ಕುಳಿತಿರುವ ಸದನದ ಸರ್ಕಾರ, ವಿರೋಧ ಪಕ್ಷದವರು ಎಲ್ಲರೂ ಸೇರಿ ಕೊಡಬೇಕಾಗಿರುವಂತಹ ಭರವಸೆ. ನಾವು ನಮ್ಮ ಪರ, ವಿರೋಧ ಪರ ಎಂದು ಮಾತನಾಡುವುದಕ್ಕಿಂತ ಬಹುಶಃ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವಂತಹ ಅತ್ಯಾಚಾರದ ಘಟನೆ ಬೇರೆ crime ಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ದಿನನಿತ್ಯ ನಡೆಯುವಂತಹ, ಪತ್ರಿಕೆಯಲ್ಲಿ ನಾವು ಮುಖಪಟು ತೆಗೆದ ತಕ್ಷಣವೇ ಅಲ್ಲಿ ಅತ್ಯಾಚಾರ, ಇಲ್ಲಿ ಅತ್ಯಾಚಾರ ಎಂದು ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದ ಹಾಗೆ ಬೇರೆ ಘಟನೆಗಳನ್ನು

ಓದುವ ಹಾಗೆ ಇಲ್ಲ. ನಾವು ಮೊದಲು ಈ ಒಂದು ಘಟನೆಯನ್ನು ಓದುವಂತಹ ಪರಿಸ್ಥಿತಿಯಲ್ಲಿ ಇದ್ದೇವೆ. ಆದ್ದರಿಂದ ಸರ್ಕಾರ ಕನಿಷ್ಠ ಚರ್ಚೆಗೆ ಮುಕ್ತವಾದ ಅವಕಾಶ ಕೊಟ್ಟು ಸುಧೀರ್ಘವಾಗಿ ಚರ್ಚೆ ಮಾಡಿ ಒಂದು ಆತ್ಮಸ್ಥೈರ್ಯವನ್ನು ಸಾರ್ವಜನಿಕರಿಗೆ ತುಂಬುವಂತಹ ಕೆಲಸವನ್ನು voluntary ಆಗಿ ಮಾಡಬೇಕಾಗುತ್ತದೆ. ಇದನ್ನು ಮಾನ್ಯ ಸಿದ್ದರಾಮಣ್ಣನವರು ಮಾಡುತ್ತಾರೆ ಎನ್ನುವ ನಂಬಿಕೆ ನನಗಿದೆ. ಇದನ್ನು ನಿಲುವಳಿ ಸೂಚನೆಗೆ ಕೊಡಬಾರದು ಎಂದು ಅವರ ಸಂಸದೀಯ ಸಚಿವರಾಗಲಿ, ಸಿದ್ದರಾಮಣ್ಣನವರಾಗಲಿ ಮಾಡಬಾರದು. ಇದಕ್ಕೆ ಮುಕ್ತ ಅವಕಾಶ ಕೊಟ್ಟು, ಚರ್ಚೆ ಮಾಡಿ, ಅಧಿಕಾರಿಗಳಾಗಲಿ, ಗೃಹಸಚಿವರಾಗಲಿ, ಮುಖ್ಯಮಂತ್ರಿಗಳಾಗಲಿ ಒಂದು ಆತ್ಮಸ್ಥೈರ್ಯವನ್ನು ತುಂಬಿ ಸಾರ್ವಜನಿಕರಿಗೆ, ಕರ್ನಾಟಕದ ಜನತೆಗೆ ಒಂದು ಸಂದೇಶವನ್ನು ಕೊಡುವುದರ ಮೂಲಕ ಅಧಿಕಾರಿಗಳಲ್ಲಿ ಇಂತಹ ವಿಚಾರಗಳಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಒಂದು ಯುವತಿಯ ಅತ್ಯಾಚಾರ ಆದ ತಕ್ಷಣ ಅತ್ಯಾಚಾರ ಮಾಡಿರುವ ವ್ಯಕ್ತಿ ಮತ್ತೆ ಮೂರು ದಿವಸಕ್ಕೆ ಎಸ್.ಎಂ.ಎಸ್. ಕಳುಹಿಸುತ್ತಾನೆ ಎಂದರೆ, ಅವನು ಮೊಬೈಲ್ ಅನ್ನು ಇಟ್ಟುಕೊಂಡು ಎಸ್.ಎಂ.ಎಸ್. ಅನ್ನು operate ಮಾಡುವಂತಹ ಪರಿಸ್ಥಿತಿಯಲ್ಲಿ ಪೊಲೀಸ್ ಅಧಿಕಾರಿ ಬಿಟ್ಟಿದ್ದಾರೆ ಎಂದರೆ ಬಹುಶಃ ಇವರ ಮೇಲೆ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಮಾನ್ಯ ಮುಖ್ಯಮಂತ್ರಿಯವರಿಗೆ, ನಮಗೆ ಯಾರಿಗೂ ಮರ್ಯಾದೆ ಬರುವುದಿಲ್ಲ. 224 ಸದಸ್ಯರಿಗೂ ಕೂಡ ಇದು ಗೌರವ ಬರುವುದಿಲ್ಲ. ಆ ಒಂದು ಏರಿಯಾದಲ್ಲಿ ಎಸ್.ಎಂ.ಎಸ್. ಮಾಡುವಂತಹ ಅವಕಾಶ ಅವನಿಗೆ ಸಿಕ್ಕಿತು ಎಂದರೆ ಬಹುಶಃ ಅವನು ಇಂತಹ crime ಗಳನ್ನು ಇನ್ನೂ 4–6 ಮಾಡಲಿಕ್ಕೆ ಅವನಿಗೆ ಉತ್ತೇಜನ ಕೊಟ್ಟ ರೀತಿ ಆಗುತ್ತದೆಯೇ ವಿನಃ ಈ ಅಧಿಕಾರಿಗಳು ಏನೂ ಅಪರಾಧ ಇಲ್ಲದೇ ಇರುವಂತಹ ಪ್ರಾಮಾಣಿಕರನ್ನು ಹಿಡಿದು ಒಳಗೆ ಹಾಕಿ ಬೋಳಿ ಮನಗೆ, ಸೂಳೇ ಮಗನೆ ಎಂದು ಮಾತನಾಡುವಂತಹ ಅಧಿಕಾರಿಗಳಿಗೆ ಇಂತಹ ಅಪರಾಧ ಮಾಡಿರುವಂತಹ ಒಬ್ಬ ಅಪರಾಧಿಯನ್ನು ಏಕೆ ಹಿಡಿಯುವುದಕ್ಕೆ ಆಗಲಿಲ್ಲ? ಎಸ್.ಎಂ.ಎಸ್. ಕಳುಹಿಸಿದರೂ ಸಹ ಮೂರು

ದಿವಸ ಅವರನ್ನು ಏಕೆ ಪತ್ತೆ ಮಾಡುವುದಕ್ಕೆ ಆಗಲಿಲ್ಲ. ಇದು ಬಹಳ ಗಂಭೀರವಾದಂತಹ ವಿಚಾರ. ದಯಮಾಡಿ ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು:- ಈಗ ನಾನು ಚರ್ಚೆಯನ್ನು ಕೇಳಿದ್ದೇನೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಎರಡೇ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:- ಚರ್ಚೆಯನ್ನು ಕೇಳಿದ್ದೇನೆ. ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಮತ್ತಿತರ ಸದಸ್ಯರು ತಂದಿರುವಂತಹ ವಿಷಯವನ್ನು ನೋಡಿದ್ದೇನೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ ಮಾತನಾಡಲು ನನಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:- ಇಲ್ಲ. ನಾನು ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ಎರಡೇ ಎರಡು ನಿಮಿಷ ಮಾನ್ಯ ಅಧ್ಯಕ್ಷರೆ, ನಾನು ಬೇರೆ ವಿಚಾರ ಯಾವುದೂ ಮಾತನಾಡುವುದಿಲ್ಲ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಏನಿದು ಮಾನ್ಯ ಬೋಪಯ್ಯನವರು ಸಭಾಧ್ಯಕ್ಷರ ಕುರ್ಚಿಯಲ್ಲೇ ಕುಳಿತಿದ್ದವರು, ತಾವು ಸಂಧಾನದಲ್ಲಿ ಏನು ಮಾತನಾಡಿದಿರಿ ಹೇಳಿ. ಅಲ್ಲಿ ಮಾತನಾಡಿದ್ದು ಒಂದು ಈಗ ಇಲ್ಲಿ ಮಾಡುತ್ತಿರುವುದು ಒಂದು.

(ಗೊಂದಲ)

ಅಧ್ಯಕ್ಷರು:- ಮಾನ್ಯ ವೈ.ಎಸ್.ವಿ.ದತ್ತಾ ಮತ್ತಿತರೆ ಸದಸ್ಯರು ತಂದಿರುವ ಪ್ರಸ್ತಾವನೆಯನ್ನು ಪೂರ್ವಭಾವಿಯಾಗಿ ಚರ್ಚೆಯಲ್ಲಿ ಕೇಳಿದ್ದೇನೆ. ಈ ವಿಷಯಗಳು ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಆದರೆ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಈಗ ಸದನದ ಕಾರ್ಯಕಲಾಪವನ್ನು ಮುಂದುವರೆಸುತ್ತೇನೆ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:- ಮಾನ್ಯ ಅಧ್ಯಕ್ಷರೆ, ನನಗೆ ಎರಡು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಿ. ಇವತ್ತು ನಾವು ತಂದಿರುವ ನಿಲುವಳಿ ಸೂಚನೆ ಏನು ಎನ್ನುವುದರ ಬಗ್ಗೆ ಹೇಳುತ್ತೇನೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ:- ಮಾನ್ಯ ಬೋಪಯ್ಯನವರೆ ಸಂಧಾನ ಸಭೆಯಲ್ಲಿ ನಾವೂ ಇದ್ದೆವು. ಮೂರು ಜನ ಬಿ.ಜೆ.ಪಿ.ಯವರಿಗೆ, ಎರಡು ಜನ ಜೆ.ಡಿ.ಎಸ್.ನವರಿಗೆ ಮಾತನಾಡಲು ಅವಕಾಶ ಕೊಡಲಾಗುವುದು ಎಂದು ಹೇಳಿದ್ದರು. ಮೂರು ಜನ ಮಾತನಾಡುವುದಕ್ಕೆ ಅಲ್ಲವೇ ತಾವು ಒಪ್ಪಿಕೊಂಡು ಬಂದಿದ್ದು? ಅದಕ್ಕೆ ಧರಣಿಗೆ ಹೋಗಿಬಿಟ್ಟರೆ ಸರಿಯಾಗುತ್ತದೆಯೇ?

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ:- ಅವರು ಉತ್ತರ ಕೊಡಬೇಕಲ್ಲವೇ?

(ಗೊಂದಲ)

ಅಧ್ಯಕ್ಷರು:– ಅವರು ಹೇಳುವುದು ಏನು ನಾನು ಚರ್ಚೆಗೆ ಹಾಕಿದ ಮೇಲೆ ನೀವು ಚರ್ಚೆ ಮಾಡಿ ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ಒಂದು ಪ್ರಾಸ್ತಾವಿಕವಾದ ವಿಷಯವನ್ನು ನಾವೇನು ಚರ್ಚೆ ಮಾಡಿದ್ದೇವೆ?..

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:– ರೂಲ್ 60 ಅಡಿಯಲ್ಲಿ ಈ ವಿಷಯ ಹೇಗೆ ಬರುತ್ತದೆ ಎಂದು ಹೇಳುವುದಕ್ಕಾದರೂ ನನಗೆ ಅವಕಾಶ ಕೊಡಬೇಕಲ್ಲಾ?

(ಗೊಂದಲ)

ಅಧ್ಯಕ್ಷರು:– ನಿಯಮ 60 ಅಡಿಯಲ್ಲಿ ಬರುವುದಿಲ್ಲ. ಅದು ನನ್ನ ತೀರ್ಮಾನ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ:– ನನ್ನದೊಂದು ಕೇಳಿ ಆನಂತರ ತಾವು ತೀರ್ಮಾನ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ(ಮಾನ್ಯ ಮುಖ್ಯಮಂತ್ರಿಗಳು):– ಮಾನ್ಯ ಬೋಪಯ್ಯನವರೆ, ಕುಳಿತುಕೊಳ್ಳಿ, ತಾವು ಸಭಾಧ್ಯಕ್ಷರಾಗಿದ್ದವರು ನೀವು ಈ ರೀತಿಯಾಗಿ ಮಾಡಿದರೆ ಹೇಗೆ? ನಿಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ.

ಶ್ರೀ ಕೆ.ಜಿ.ಬೋಪಯ್ಯ:– ಇದು ರೂಲ್‌ನಲ್ಲಿ ಹೇಗೆ ಬರುತ್ತದೆ ಎಂದು ಹೇಳಿಲ್ಲ.

ಶ್ರೀ ಸಿದ್ದರಾಮಯ್ಯ:– ಈ ಬಗ್ಗೆ ಮೂರು ಜನರು ಹೇಳಿದ್ದಾರೆ. ಇತ್ತೀಚೆಗೆ ಅತ್ಯಾಚಾರ ಮತ್ತು ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯಗಳು ಇಂತಹ ಕೆಲವು ಘಟನೆಗಳು ನಡೆದಿವೆ ಎಂದು ಹೇಳಿ ನಿಯಮ 60ರ ಅಡಿಯಲ್ಲಿ

ಅವರು ವಿಷಯ ಪ್ರಸ್ತಾಪ ಮಾಡಿದ್ದಾರೆ. ನೀವು ಅವರಿಗೆ ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡಬೇಕೇ ಅಥವಾ ಬೇಡವೇ ಎನ್ನುವುದಕ್ಕೆ ಪ್ರಾಸ್ತಾವಿಕವಾಗಿ ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಶ್ರೀ ಎಸ್.ಸುರೇಶ್ ಕುಮಾರ್‌ರವರು, ಶ್ರೀ ಅರವಿಂದ ಲಿಂಬಾವಳಿಯವರು ಕೂಡ ಮಾತನಾಡಿದ್ದಾರೆ. ಬಿಜೆಪಿ ಪಕ್ಷದಿಂದ ಮೂರು ಜನರು ಈ ಬಗ್ಗೆ ಮಾತನಾಡಿದ್ದಾರೆ. ಶ್ರೀ ವೈ.ಎಸ್.ವಿ.ದತ್ತಾ, ಶ್ರೀ ಎನ್.ಚೆಲುವರಾಯಸ್ವಾಮಿಯವರು ಸಹ ಮಾತನಾಡಿದ್ದಾರೆ. ಕಾನೂನು ಸುವ್ಯವಸ್ಥೆಯ ಬಗ್ಗೆ ಈ ಸದನದಲ್ಲಿ ಈಗಾಗಲೇ ಒಂದು ಸಾರಿ ಪ್ರಸ್ತಾಪವಾಗಿದೆ. ಅದು ಆದನಂತರ ಅತ್ಯಾಚಾರವಾಗಿರುವ ಒಂದು ಘಟನೆಯು ಆಗಿದೆ. ಸರ್ಕಾರವು ಈ ಬಗ್ಗೆ ಸಮರ್ಪಕವಾಗಿ ಉತ್ತರ ಕೊಟ್ಟಿದೆ. ಸರ್ಕಾರವು ಏನೇನು ಕ್ರಮ ತೆಗೆದುಕೊಂಡಿದ್ದೇವೆಂದು ಸಹ ಹೇಳಿದ್ದೇವೆ. ಆದರೂ ಅವರು preliminary submission ನಲ್ಲಿ ಬಹಳ ದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ ನಿಮ್ಮ ಮಾತುಗಳನ್ನು ಸಹ ಅವರು ಕೇಳಲಿಲ್ಲ, ದೀರ್ಘವಾಗಿ conclusion ನಲ್ಲಿ ಏನೇನೂ ಹೇಳಬೇಕೋ ಎಲ್ಲವನ್ನೂ ಅವರು ಹೇಳಿಬಿಟ್ಟಿದ್ದಾರೆ. ಈಗ ನಾವು ಇದು ನಿಯಮ 60ರ ಅಡಿಯಲ್ಲಿ ಬರುತ್ತದೆಯೇ? ಇವರು ಕಳೆದ 5 ವರ್ಷದಿಂದ ಅಧಿಕಾರದಲ್ಲಿದ್ದರು. ಇಂತಹ ಅನೇಕ ವಿಚಾರಗಳನ್ನು ನಾವು ವಿರೋಧಪಕ್ಷದಲ್ಲಿದ್ದುಕೊಂಡು ಪ್ರಸ್ತಾಪ ಮಾಡಿದ್ದೇವೆ. ಕಳೆದ 5 ವರ್ಷಗಳಲ್ಲಿ ಒಂದೇ ಒಂದು ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡಿರುವಂತಹ ನಿದರ್ಶನ ಇದೆ ಎಂದು ತೋರಿಸಲಿ ನೋಡೋಣ. ಒಂದೇ ಒಂದು ಇಲ್ಲಿ ಅವರು convertion ಮಾಡಿರಬಹುದು. 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಒಂದೇ ಒಂದು ನಿದರ್ಶನ ಇದೆಯಾ?

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ನಿಯಮ 60ರ ಅಡಿಯಲ್ಲಿ ಕೊಡದೇ ಇದ್ದರೂ ಕೂಡಲೇ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಪ್ರಶ್ನೋತ್ತರವನ್ನು ಬದಿಗೊತ್ತಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಎಸ್.ಶಿವಾನಂದಪಾಟೀಲ್:- ಮಾನ್ಯ ಬೊಮ್ಮಾಯಿಯವರೆ, ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಆದರೂ ಮಾಡಲಿ.

ಶ್ರೀ ಸಿದ್ದರಾಮಯ್ಯ:- ಈ ವಿಚಾರವನ್ನು ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಅವರು ಏನು 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿ ವಾದ ಮಾಡಿದ್ದಾರೆ. ಆ ವಾದವನ್ನು ಪುರಸ್ಕರಿಸುವುದಕ್ಕೆ ಯೋಗ್ಯ ಅಲ್ಲ. ಆದ್ದರಿಂದ ಇದನ್ನು ಮಾನ್ಯ ಅಧ್ಯಕ್ಷರೆ, ದಯಮಾಡಿ ತಳ್ಳಿಹಾಕಬೇಕು. ಅವರ ವಾದ ಸಂಪೂರ್ಣವಾಗಿ 60ರ ಅಡಿಯಲ್ಲಿ ಬರುವುದಿಲ್ಲ.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್:- ಸರ್ಕಾರವು ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಸಿದ್ದರಾಮಯ್ಯ:- ನಾವು ಇದೊಂದೇ ಅಲ್ಲ, ಈ ವಿಚಾರವನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಕಾನೂನು ಸುವ್ಯವಸ್ಥೆಯನ್ನು ಚೆನ್ನಾಗಿ ಮಾಡುತ್ತಿದ್ದೇವೆ. ಸರ್ಕಾರವು ಯಾವುದೇ ವೈಫಲ್ಯಗಳನ್ನು, ದೋಷಗಳನ್ನು ಮಾಡಿಲ್ಲ. ಕಾನೂನು ಚೆನ್ನಾಗಿರುವುದರಿಂದಲೇ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಇದೆ.

ಶ್ರೀ ಕೆ.ಜಿ.ಬೋಪಯ್ಯ:- ಅದಕ್ಕೆ ಕೇಂದ್ರಸರ್ಕಾರವು ವರದಿಯನ್ನು ಕೇಳಿದೆಯಲ್ಲಾ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಬೋಪಯ್ಯನವರೆ ತಾವು ಕೇಳಿ,

(ಗೊಂದಲ)

ಶ್ರೀ ಎಸ್.ಶಿವಾನಂದಪಾಟೀಲ್:- ಗೋವಾದಲ್ಲಿ ಏನು ಮಾಡುತ್ತಿದ್ದೀರಿ?

ಶ್ರೀ ಕೆ.ಜಿ.ಬೋಪಯ್ಯ:- ಗೋವಾದಲ್ಲಿ ಹೋಗಿ ಕೇಳಿ. ಗೋವಾದ ಬಗ್ಗೆ ಇಲ್ಲೇನು ನೀವು ಪ್ರಸ್ತಾಪ ಮಾಡುವುದು?

ಶ್ರೀ ಸಿದ್ದರಾಮಯ್ಯ:- ಅತ್ಯಾಚಾರವನ್ನು ಯಾರೇ ಮಾಡಿದ್ದರೂ ಕೂಡ ಅವರ ಮೇಲೆ ನಾವು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಜಿ.ಬೋಪಯ್ಯ:- ಕಾನೂನು ಸುವ್ಯವಸ್ಥೆ ಸರಿ ಇದ್ದಿದ್ದರೆ ಕೇಂದ್ರ ಸರ್ಕಾರವು ವರದಿಯನ್ನು ಕೇಳುವಂತಹ ಅವಶ್ಯಕತೆ ಬರುತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಬೋಪಯ್ಯನವರೆ, ನಾನು ಮಾತನಾಡುತ್ತಿದ್ದರೆ ನೀವು ಎದ್ದುನಿಂತುಕೊಂಡು ಮಾತನಾಡಿದರೆ ಹೇಗೇ? ನಾವು ಈ ಬಗ್ಗೆ ಕಠಿಣವಾದ ಕ್ರಮ ತೆಗೆದುಕೊಳ್ಳುತ್ತೇವೆ. ನಾನು ನಮ್ಮ Home Minister ರವರಿಗೆ Home Department ಗೆ ಹೇಳಿದ್ದೇನೆ. ಆ Inspector ಯಾರು 376 ಕೇಸನ್ನು FIRನಲ್ಲಿ ದಾಖಲು ಮಾಡಿಕೊಂಡಿಲ್ಲ, ಅವರು information ಕೊಟ್ಟರೂ FIRನಲ್ಲಿ ಅದನ್ನು ನಮೂದು ಮಾಡಿಲ್ಲವೆಂದು ಕೂಡಲೇ ಅವರ ಮೇಲೆ FIR ಹಾಕಬೇಕೆಂದು ಹೇಳಿ ಅವರ ಮೇಲೆ FIR ಹಾಕಿಸಿದ್ದೇವೆ. ನಾನು ಈ ಬಗ್ಗೆ ನಿನ್ನೆಯೂ ಕೂಡ ಹೇಳಿದ್ದೇನೆ ಇವತ್ತು ಕೂಡ ಹೇಳುತ್ತಿದ್ದೇನೆ. I.O. is at liberty to arrest him. FIR is filed against him under Section 166(A) of IPC. It is a new Section inserted through amendment to IPC. Isn't it? In the history of Karnataka, for the first time ಒಬ್ಬ IO ಮೇಲೆ Statiion House Officer ಮೇಲೆ FIR ಅನ್ನು ದಾಖಲು ಮಾಡಿರುವುದು ಇದೇ ಮೊದಲು. ಹಿಂದೆ ಯಾವ ಕಾಲದಲ್ಲಿಯೂ ಮಾಡಿರುವುದಿಲ್ಲ. ಆದ್ದರಿಂದ ನಾವು ಯಾರನ್ನೇ ರಕ್ಷಣೆ ಮಾಡುವುದಾಗಲಿ ಮಾಡಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಈ ನಾಡಿನ ಜನತೆಗೆ ಹೇಳುತ್ತೇನೆ, ಈ ಸರ್ಕಾರ ನಿಮಗೆ ಎಲ್ಲ ರಕ್ಷಣೆಯನ್ನು, ಭದ್ರತೆಯನ್ನು ನಾವು ಒದಗಿಸುತ್ತೇವೆ. ಯಾರೂ ಕೂಡ ಆತಂಕದಿಂದ ಬದುಕಬೇಕಾದಂತಹ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಿಮಗೆ ನಾವು ಏನು ಹೇಳಬೇಕು ಗೊತ್ತಿಲ್ಲ. ರೇಪ್ ಮಾಡಿದಂತಹ ಆರೋಪ ಹೊತ್ತಿದ್ದವರೇ ನಿಮ್ಮಲ್ಲಿದ್ದರು. ನಿಮಗೆ ನಾಚಿಕೆಯಾಗುವುದಿಲ್ಲವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ರೇಪ್ ಮಾಡಿದವಂತಹವರು ನಿಮ್ಮಲ್ಲಿದ್ದರು, ನಿಮ್ಮಲ್ಲಿ Blue film ನೋಡುತ್ತಿದ್ದರು, ನೀವು ಸದನದ ಅಧ್ಯಕ್ಷತೆಯನ್ನು ವಹಿಸಿ, ಸುಮ್ಮನಿದ್ದೀರಿ. ಹೆಂಡತಿಯನ್ನು ಕೊಂದು ಹಾಕಿದವರು ನಿಮ್ಮಲ್ಲಿದ್ದರು. ನಿಮಗೆ ನಾಚಿಕೆಯಾಗಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಾವು ಯಾರನ್ನು ಕೂಡ ರಕ್ಷಣೆ ಮಾಡುವವರಲ್ಲ. ಮಾನ್ಯ ಅಧ್ಯಕ್ಷರೆ ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡುವುದನ್ನು ತಳ್ಳಿ ಹಾಕಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:- ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಈಗ ಬೇಡಿಕೆಯ ಮೇಲೆ ಸರ್ಕಾರದಿಂದ ಉತ್ತರ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, that Inspector is arrested.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಆ Inspector ಅನ್ನು arrest ಮಾಡಿದ್ದೇವೆ. ನಿಮಗೆ ನಾಚಿಕೆಯಾಗಬೇಕು.

(ಗೊಂದಲ)

ಅಧ್ಯಕ್ಷರು:– ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ತೀರ್ಮಾನವಾಗಿದೆ. ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಜಿ.ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ನಾನು ತಮ್ಮ decision ಅನ್ನು review ಮಾಡಿ ಎಂದು ಕೇಳುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:– ಇದನ್ನು review ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ.ಜಿ.ಬೋಪಯ್ಯ:– ಪುನರ್ ಪರಿಶೀಲನೆ ಮಾಡಿ ಎಂದು ಕೇಳುವುದಕ್ಕೆ ನನಗೆ ಹಕ್ಕಿದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಪರಾಧಿಗಳಿಗೆ ಹೆದರಿಕೆ ಬರುವಂತಹ ಉತ್ತರ ಅಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಈ ಬಗ್ಗೆ ಚರ್ಚೆಯಾಗಲಿ ನಂತರ ನಾವು ಉತ್ತರ ಕೊಡುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಿಮಗೆ ನಾಚಿಕೆಯಾಗಬೇಕು.

(ಗೊಂದಲ)

ಅಧ್ಯಕ್ಷರು:– ಶಿಕ್ಷಣ ಇಲಾಖೆಗೆ ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ಈ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿದ್ದರಾಮಯ್ಯ:- ಬಿಜೆಪಿ ಪಕ್ಷದವು ರಾಜಕೀಯಕ್ಕೋಸ್ಕರ ಈ ರೀತಿ ಮಾಡುವುದಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು:- ಮಾನ್ಯ ಸಚಿವರೆ ತಾವು ಉತ್ತರವನ್ನು ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:- ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಆರ್.ವಿ.ದೇಶಪಾಂಡೆ:- ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:- ಮಾನ್ಯ ರೇವಣ್ಣನವರೆ, ಈಗ ಬೇಡ. ಈಗ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಮೊನ್ನೆ ದಿನ ಈ ಬಗ್ಗೆ ಉತ್ತರ ಕೊಡಬೇಕಾಗಿತ್ತು, ನಿನ್ನೆಯು ಕೂಡ ಈ ಬೇಡಿಕೆಯ ಮೇಲೆ ಉತ್ತರ ಕೊಡಿಸುವುದಕ್ಕಾಗಲಿಲ್ಲ. ದಯವಿಟ್ಟು ನಾನು ನಿಮಗೆ ಕೈಮುಗಿಯುತ್ತೇನೆ ತಾವು ಕುಳಿತುಕೊಳ್ಳಿ, ಮಾನ್ಯ ಸಚಿವರೆ ತಾವು ಉತ್ತರ ಕೊಡಿ.

3) ವಿತ್ತೀಯ ಕಾರ್ಯಕಲಾಪಗಳು

ಅ. 2014-15ನೇ ಸಾಲಿನ ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳಿಂದ ಉತ್ತರ

ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ **ಸಚಿವರು):-** ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರ ಈ ತರಹದ ವರ್ತನೆಯನ್ನು ಈ ಸದನವು ಖಂಡಿಸಬೇಕಾಗಿದೆ. ಈ ಮನೆಯ ಗೌರವಾನ್ವಿತ ಸದಸ್ಯರಾದ ಶ್ರೀ ಅರವಿಂದ ಲಿಂಬಾವಳಿಯವರು, ಶ್ರೀ ಕೆ.ಆರ್.ರಮೇಶ್ ಕುಮಾರ್‌ರವರು, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು,